ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ಫೆಬ್ರವರಿ 02, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 261 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಜನಪ್ರಿಯ ಘೋಷಣೆ ರಹಿತ, ಬೆಳವಣಿಗೆ ಬಜೆಟ್

ನವದೆಹಲಿ, ಜ. 1 – ಲೋಕಸಭಾ ಚುನಾವಣೆ ಸನಿಹವಿದ್ದರೂ, ಜನಪ್ರಿಯ ಘೋಷಣೆಗಳಿಂದ ದೂರ ಉಳಿದಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್, ವಿತ್ತೀಯ ಶಿಸ್ತು ಕಾಯ್ದುಕೊಳ್ಳುವ ಮಧ್ಯಂತರ ಬಜೆಟ್ ಮಂಡಿಸಿದ್ದಾರೆ.

ಲೋಕಸಭಾ ಚುನಾವಣೆ ಸನಿಹದಲ್ಲೇ ಇರುವ ಹಿನ್ನೆಲೆಯಲ್ಲಿ ಸೀತಾರಾಮನ್ ಅವರು ಮಧ್ಯಂತರ ಅವಧಿಗಾಗಿ ಬಜೆಟ್ ಮಂಡಿಸಿದ್ದು ಬಡವರು, ಮಹಿಳೆಯರು, ಯುವಕರು ಹಾಗೂ ರೈತರ ಕಡೆ ಹೆಚ್ಚು ಗಮನ ಹರಿಸಿರುವುದಾಗಿ ತಿಳಿಸಿದ್ದಾರೆ.

ತೆರಿಗೆಗಳಲ್ಲಿ ಯಾವುದೇ ಬದಲಾವಣೆ ತಂದಿಲ್ಲ, ಆದಾಯ ತೆರಿಗೆ ಪದ್ಧತಿಯೂ ಯಥಾಸ್ಥಿತಿ ಯಲ್ಲಿ ಮುಂದುವರೆದಿದೆ. ಮೂಲಭೂತ ಸೌಲಭ್ಯಕ್ಕೆ ಒತ್ತು ನೀಡುವ ಹಾಗೂ ವಿತ್ತೀಯ ಶಿಸ್ತು ಕಾಯ್ದುಕೊಳ್ಳುವ ಬಜೆಟ್ ಅನ್ನು ಸೀತಾರಾಮನ್ ಮಂಡಿಸಿದ್ದಾರೆ.

'ಸಬ್ಕಾ ಸಾಥ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್' ಎಂಬುದು ಸರ್ಕಾರದ ಮಂತ್ರವಾಗಿದೆ. 'ಸಬ್ಕಾ ಪ್ರಯಾಸ್' (ಎಲ್ಲರ ಪ್ರಯತ್ನ) ಮೂಲಕ ಕೊರೊನಾದಂತಹ ಸವಾಲುಗಳನ್ನು ಎದುರಿಸಿ ದ್ದೇವೆ. ಆತ್ಮನಿರ್ಭರ ಭಾರತದ ಕಡೆ ಹೆಜ್ಜೆ ಹಾಕಿದ್ದೇವೆ.



**ನಿರ್ಮಲ ಸೀತಾರಾಮನ್ ಬಜೆಟ್‌ನಲ್ಲಿ ಬಡವರು, ಮಹಿಳೆಯರು, ಯುವಕರು ಹಾಗೂ ರೈತರು ಎಂಬ 'ಜಾತಿ'ಗಳಿಗೆ ಆದ್ಯತೆ**

ಅಮೃತ ಕಾಲಕ್ಕಾಗಿ ಭದ್ರ ಬುನಾದಿ ಹಾಕಿದ್ದೇವೆ ಎಂದು ಸೀತಾರಾಮನ್ ಬಜೆಟ್ ಮಂಡನೆಯಲ್ಲಿ ಹೇಳಿದ್ದಾರೆ.

ಬಜೆಟ್‌ನಲ್ಲಿ ಸಾಮಾಜಿಕ ನ್ಯಾಯ ಹಾಗೂ ಸೆಕ್ಯುಲರಿಸಂಗಳಿಗೆ ಹೊಸ ವ್ಯಾಖ್ಯಾನವನ್ನೂ ಬರೆಯಲಾಗಿದೆ.

ಹಿಂದೆ ಸಾಮಾಜಿಕ ನ್ಯಾಯ ಕೇವಲ ರಾಜಕೀಯ ಘೋಷಣೆಯಾಗಿತ್ತು. ನಮ್ಮ ಸರ್ಕಾರ ಸಾಮಾಜಿಕ ನ್ಯಾಯವನ್ನು ಪರಿಣಾಮಕಾರಿಯಾಗಿ ಹಾಗೂ ಆಡಳಿತದ ಅಗತ್ಯ ಮಾದರಿಯಾಗಿ ಜಾರಿಗೆ ತಂದಿದೆ. ಎಲ್ಲ ಅರ್ಹರಿಗೆ ಯೋಜನೆಗಳನ್ನು ತಲುಪಿಸಲಾಗಿದೆ. ಇದರಿಂದಾಗಿ ಸಮಗ್ರ ಸಾಮಾಜಿಕ ನ್ಯಾಯ ಸಾಧಿಸಲಾಗಿದೆ ಎಂದು ಸೀತಾರಾಮನ್ ಹೇಳಿದರು.

ಇದು ಸಕ್ರಿಯವಾಗಿರುವ ಸೆಕ್ಯುಲರಿಸಂ ಆಗಿದೆ. ಭ್ರಷ್ಟಾಚಾರ ಕಡಿಮೆ ಮಾಡಲಾಗಿದೆ ಹಾಗೂ ಸ್ವಜನಪಕ್ಷ ವಾದ ತಡೆಯಲಾಗಿದೆ. ಅರ್ಹ ಫಲಾನುಭವಿಗಳಿಗೆ ಯೋಜನೆ ತಲುಪಿಸುವಲ್ಲಿ ಪಾರದರ್ಶಕತೆಯ ಭರವಸೆ ಇದೆ ಎಂದೂ ಅವರು ಹೇಳಿದರು.

ಬಡವರು, ಮಹಿಳೆಯರು, ಯುವಕರು ಹಾಗೂ ರೈತರು ನಾಲ್ಕು ಪ್ರಮುಖ ಜಾತಿಗಳು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದನ್ನು ಪ್ರಸ್ತಾಪಿಸಿರುವ (2ನೇ ಪುಟಕ್ಕೆ)

## ಸದ್ವಿಚಾರದಿಂದ ಆತ್ಮಶಕ್ತಿ, ಮನಸ್ಸಿಗೆ ಶಾಂತಿ

ದಾವಣಗೆರೆ, ಫೆ. 1 – ಕೆಟ್ಟ ವಿಚಾರಗಳು ಹಾಗೂ ಕೆಟ್ಟ ಸಂಸ್ಕಾರಗಳಿಂದಾಗಿ ಆತ್ಮಶಕ್ತಿ ಕುಂದುತ್ತಿದೆ. ಇದರಿಂದಾಗಿ ಕಲಿಯುಗದಲ್ಲಿ ಕುಟುಂಬ ಹಾಗೂ ಸಮಾಜದಲ್ಲಿ ಸಮಸ್ಯೆಗಳು ಉಲ್ಬಣಿಸುತ್ತಿವೆ. ಇದನ್ನು ತಪ್ಪಿಸಬೇಕಾದರೆ ಸಕಾರಾತ್ಮಕ ಚಿಂತನೆಯ ಕಲೆ ರೂಢಿಸಿ ಕೊಳ್ಳಬೇಕು ಎಂದು ಅಧ್ಯಾತ್ಮಿಕ ಮಾರ್ಗದರ್ಶಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಶಿವಾನಿ ದೀದಿ ತಿಳಿಸಿದ್ದಾರೆ.



ನಗರದ ಬಾಪೂಜಿ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಿಂದ ಆಯೋಜಿಸಲಾಗಿದ್ದ 'ಸುಖ – ಶಾಂತಿಮಯ ಜೀವನಕ್ಕಾಗಿ ಸಕಾರಾತ್ಮಕ ಚಿಂತನೆ ಕಲೆ' ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

ಆತ್ಮ ಶರೀರವನ್ನು ತೊರೆದ ಮೇಲೆ 'ಓಂ ಶಾಂತಿ' ಎಂದು ಹೇಳುತ್ತಾರೆ. ಆದರೆ, ಜೀವಂತವಿರುವಾಗಲೇ ಶಾಂತಿ ಪಡೆದುಕೊಳ್ಳಬೇಕು. ನಮ್ಮ ಕರ್ಮಗಳನ್ನು ನಿರ್ವಹಿಸುತ್ತಲೇ ಶಾಂತವಾಗಿರಬೇಕು ಎಂದರು.

ಸರಿಯಾದ ಸಂಸ್ಕಾರಗಳನ್ನು ಬೆಳೆಸಿಕೊಳ್ಳದಿದ್ದರೆ ಕೋಪ, ಅಸೂಯೆ, ದ್ವೇಷ ಇತ್ಯಾದಿ ಗುಣಗಳನ್ನು ಹೊಂದುತ್ತೇವೆ. ನಂತರ, ನಾವು ಆತ್ಮಾವಲೋಕನ ಮಾಡಿಕೊಳ್ಳದೇ ಬೇರೆಯವರನ್ನು ಆರೋಪಿಸುತ್ತೇವೆ. ನಮ್ಮ ತಪ್ಪುಗಳಿಗೆ ಬೇರೆಯವರನ್ನು ದೂರದೇ, ಸರಿ - ತಪ್ಪು ಗುರುತಿಸುವ ವಿವೇಕ ಹೊಂದಬೇಕು ಎಂದು ತಿಳಿಸಿದರು.

ಉದ್ವಿಗ್ನತೆ, ಕೋಪ, ಹೆದರಿಕೆ, (5ನೇ ಪುಟಕ್ಕೆ)

## ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಎರಡು ಸೀರೆ

**ರಾಜ್ಯ ಸಂಪುಟದ ತೀರ್ಮಾನ**

ಬೆಂಗಳೂರು, ಫೆ. 1 - ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ತಲಾ ಎರಡು ಸೀರೆಗಳನ್ನು ವಿತರಿಸಲು ರಾಜ್ಯ ಸಚಿವ ಸಂಪುಟ ತೀರ್ಮಾನ ಕೈಗೊಂಡಿದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಯಡಿ 1,37,469 ಕಾರ್ಯಕರ್ತೆಯರಿಗೆ ಈ ಸೀರೆಗಳು ಲಭ್ಯವಾಗಲಿವೆ. ಸೀರೆ ಖರೀದಿಗಾಗಿ 13.75 ಕೋಟಿ ರೂ.ಗಳನ್ನು ನೀಡಲು ಸಂಪುಟ ಸಮ್ಮತಿಸಿದೆ.

ಆನ್ ಲೈನ್ ಮೂಲಕ ಮದುವೆ ನೋಂದಣಿಗೆ ಅವಕಾಶ ಕಲ್ಪಿಸಲು ಹಿಂದೂ ವಿವಾಹ ಕಾಯಿದೆ ತಿದ್ದುಪಡಿಗೆ ಸಮ್ಮತಿಸಿದ್ದು, ಇದರಿಂದ ವಿವಾಹ ನೋಂದಣಿ ಸರಳೀಕರಣಕ್ಕೆ ಸಹಕಾರಿಯಾಗಲಿದೆ.

ಈ ಮೊದಲು ಉಪನೋಂದಣಿ ಅಧಿಕಾರಿಗಳ ಕಚೇರಿಗಳಲ್ಲಿ ವಿವಾಹ ನೋಂದಣಿ ಆಗುತ್ತಿದ್ದವು, ಈಗ ಆನ್ ಲೈನ್ ಮೂಲಕ ನೋಂದಣಿಗೆ ಅವಕಾಶ ಮಾಡಿಕೊಡಲಾಗಿದೆ.

ಕಾವೇರಿ-2 ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ನೋಂದಣಿ ಮಾಡಬಹುದು. ಇದರಿಂದ ಉಪನೋಂದಣಿ ಕಚೇರಿಗಳಿಗೆ ಅಲೆಯುವಂತಿಲ್ಲ. ಹಿಂದೂ ವಿವಾಹಗಳ ನೋಂದಣಿ ನಿಯಮಾವಳಿಗಳಿಗೆ ಮಾಡಿರುವ ತಿದ್ದುಪಡಿಗೆ ಅನುಮೋದನೆ ನೀಡಲಾಗಿದೆ. (2ನೇ ಪುಟಕ್ಕೆ)

## ಮತ್ತಿಹಳ್ಳಿ ಸಂತೋಷ್‌ರವರಿಂದ ನಾಮಪತ್ರ ಸಲ್ಲಿಕೆ



ದಿ. ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ. ಇದರ ಆಡಳಿತ ಮಂಡಳಿ ಚುನಾವಣೆಯು ದಿನಾಂಕ 11.02.2024ರ ಭಾನುವಾರ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಡಾ. ಎಂ.ಸಿ. ಮೋದಿ ವೃತ್ತದ ಬಳಿ ದಾವಣಗೆರೆ ಇಲ್ಲಿ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ದಿನಾಂಕ 01.02.2024ರ ಗುರುವಾರ ನಿಮ್ಮೆಲ್ಲರ ಆಶೀರ್ವಾದದಿಂದ ನಾಮಪತ್ರ ಸಲ್ಲಿಸಿದ್ದೇನೆ. ದಯಮಾಡಿ ಬ್ಯಾಂಕಿನ ಎಲ್ಲಾ ಷೇರುದಾರರು ತಮ್ಮ ಅಮೂಲ್ಯವಾದ ಒಂದು ಮತವನ್ನು ನೀಡುವುದರ ಮೂಲಕ ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ದಿ. ಮತ್ತಿಹಳ್ಳಿ ವೀರಣ್ಣನವರ ಪುತ್ರ **ಮತ್ತಿಹಳ್ಳಿ ಸಂತೋಷ್‌ರವರ** ಬಂಧುಗಳು, ಗೆಳೆಯರು, ಹಿತೈಷಿಗಳು ಉಪಸ್ಥಿತರಿದ್ದರು.






**ಸೈಟ್ ಮಾರಾಟಕ್ಕೆ (KHB)**
ಹೌಸಿಂಗ್ ಬೋರ್ಡ್ 6X9 (20X30) ಪೂರ್ವ 16 ಲಕ್ಷ 12x18 ಮೀಟರ್ (40x60) ಪಶ್ಚಿಮ, 67 ಲಕ್ಷ
**ಕಿರಣ್ ಭೂಸ್ನೂರ್**
97315 63409, 98440 63409
ರಿಜಿಸ್ಟರ್ ಖರ್ಚು + ಕಮೀಷನ್ ಸೇರಿ

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿರುವ ತಿಮ್ಮಾರೆಡ್ಡಿ ಕಾಲೇಜ್ ಗೇಟ್ ಎದುರುಗಡೆ 30x60 North, 30x45 South, 40x40 South, 60x60 North, 60x45 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಹತ್ತಿರ 20x30 ಅಡಿ ಅಳತೆಯ ಪಶ್ಚಿಮ ದಿಕ್ಕಿನ ಫೈನಲ್ ಅಪ್ರೂವ್ಡ್ 2 ಸೈಟುಗಳು ಮಾರಾಟಕ್ಕಿವೆ. ಪ್ರತಿ ಸೈಟಿಗೆ 11 ಲಕ್ಷ ರೂ.ಗಳು ಮಾತ್ರ.
97402 58276
ಬ್ಯಾಂಕ್ ಲೋನ್ ಆಗುತ್ತದೆ.

**ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ**
ಗೀತಂ ಕಾಲೇಜ್ ಹತ್ತಿರ 20x48 West, 30x45 East, 30x50 East, 40x60 North, 30x50 North ಹೊಸ ಮನೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಅಪಾರ್ಟ್‌ಮೆಂಟ್‌ನಲ್ಲಿ ಮನೆಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ ಅಥಣಿ ಕಾಲೇಜ್ ಹತ್ತಿರ ಮೂರು ಬೆಡ್ ರೂಮ್ ಮನೆ, ಎರಡು ಬೆಡ್ ರೂಮ್ ಮನೆ.
ರಿಯಲ್ ಎಸ್ಟೇಟ್ ಏಜೆಂಟ್, ದಕ್ಷಿತ್ ಐನಳ್ಳಿ
77955 06795

**ಕೆಲಸಗಾರರು ಬೇಕಾಗಿದ್ದಾರೆ**
ಕಂಪ್ಯೂಟರ್‌ನಲ್ಲಿ ಬಿಲ್ ಹಾಕಿ ಕೊಡಲು ಅನುಭವಿ ಮಹಿಳಾ ಕೆಲಸಗಾರರು ಬೇಕಾಗಿದ್ದಾರೆ. ಖುದ್ದು ಭೇಟಿ ಆಗತಕ್ಕದ್ದು, ಸಮಯ : 12 PM to 4 PM ಒಳಗೆ ಭೇಟಿ ಮಾಡುವುದು.
94482 33212, 95382 13335

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಮ್ಯಾನೇಜರ್ ಹುದ್ದೆಗೆ ಬೇಕಾಗಿದ್ದಾರೆ. ಸಂಪರ್ಕಿಸಿ :
**ಶಂಕರಲೀಲಾ ಫ್ಯೂಯಲ್ ಸ್ಟೇಷನ್**
ಜೈನ್ ಟೆಂಪಲ್ ಪಕ್ಕ, ಆವರಗೆರೆ-ದಾವಣಗೆರೆ.
90190 94446

**ಮನೆ ಬಾಡಿಗೆಗೆ**
**ಚೌಕಿಪೇಟೆಯಲ್ಲಿ ಬೇವಿನ** ಮರದ ಹತ್ತಿರ, 2 BHK, 1ನೇ ಮಹಡಿಯಲ್ಲಿ 2 ಮನೆಗಳು ಬಾಡಿಗೆಗೆ ಇವೆ.
94484 05913
94488 45062

**ಬೇಕಾಗಿದ್ದಾರೆ**
ದಾವಣಗೆರೆಯ ವೆಜ್ ಹೋಟೆಲ್‌ನಲ್ಲಿ ಕೆಲಸಕ್ಕೆ ಸೌತ್ ಇಂಡಿಯನ್, ಚೈನೀಸ್, ತಂದೂರಿ ಚೆಫ್, ಕ್ಲೀನರ್ ಮತ್ತು ಹೆಲ್ಪರ್ಸ್ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ.
95350 35660, 63646 64518

**WANTED**
1. Electrical Diploma or ITI -1
2. Accounts Assistant - 1 Post
B.Com, Tally ERP Knowledge
**Cotmac Industrial Trading Pvt., Ltd.**
98800 19842, 98800 19811

**WANTED**
**OM DENTAL CARE**
Ram & Co Circle, Davangere.
1) BDS Dentist
2) Staff
(Full time & Part Time)
90669 93738

**FOR SALE**
Honda Activa
2012 model white Colour
in Good running condition
94813 63681
94802 26277

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಬಾಲಾಜಿ ಸ್ಯಾರೀಸ್ ಮತ್ತು ಮ್ಯಾಚಿಂಗ್ ಸೆಂಟರ್. ಶಾಂತಲಾ ಸಿಲ್ಕ್ ಪಕ್ಕ, ಚಾಮರಾಜ ಪೇಟೆ. ಸಂಪರ್ಕಿಸಿ :
98800 26258

**ಹಸಿರು, ಒಣಮೇವು ಬೇಕಾಗಿರುತ್ತದೆ**
ಹಸುಗಳಿಗೆ ಮೇವಿಗಾಗಿ ಹಸಿರು ಮತ್ತು ಒಣಮೇವು ಬೇಕಾಗಿರುತ್ತದೆ. ಸಂಪರ್ಕಿಸಿ.
**ಅಭಿಷೇಕ್ ಟಿಂಬರ್ ಅಂಡ್ ಸಾ ಮಿಲ್**
ಆರ್.ಎಂ.ಸಿ ಲಿಂಕ್ ರೋಡ್, ಆನೆಕೊಂಡ, ವಿನಾಯಕ ಚಿತ್ರ ಮಂದಿರದ ಹತ್ತಿರ, ಬಂಬೂ ಬಜಾರ್, ದಾವಣಗೆರೆ.
96063 07471

**SECURITY GUARD**
**ಬೇಕಾಗಿದ್ದಾರೆ**
ಉತ್ತಮ ವೇತನ
70012 87756, 97409 77785

**ಬೇಕಾಗಿದ್ದಾರೆ**
ಟ್ಯಾಲಿ ಆಪರೇಟರ್(Tally Operator) ಮಹಿಳೆಯರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ. ಅನುಭವವಿಲ್ಲದವರೂ ಸಂಪರ್ಕಿಸಬಹುದು.
ಮೊ : 99161 11194

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿ.7.2.2024ರ ಬುಧವಾರ
ದಿ.8.2.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
**ಅನುಗ್ರಹ ಆಸ್ಪತ್ರೆ**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ.
97388 27452
74110 25934

**REQUIRED**
Need Computer Operater for Cyber Shop, Near Ram and co. Circle. Contact :
70221 58935

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಶ್ರೀ ಮಹಾಕಾಳಿ ಜ್ಯೋತಿಷ್ಯರು**
**ನಿಮಿಷಾಂಬ ದೇವಿ ಉಪಾಸಕರು**
ಪ|| ಶ್ರೀಧರ್ ಗುರೂಜಿ, ಮಕ್ಕಳ ವಿದ್ಯೆಯಲ್ಲಿ ಅಡೆ-ತಡೆ, ಹಣಕಾಸಿನ ಮುಗ್ಗಟ್ಟು, ವೃತ್ತಿ ವ್ಯಾಪಾರದಲ್ಲಿ ಲಾಭ-ನಷ್ಟ, ಮದುವೆ, ಡೈವರ್ಸ್ ಸಮಸ್ಯೆ, ಪ್ರೇಮ ವಿಚಾರ, ಶತ್ರು ಕಾಟ, ಮಾಟ-ಮಂತ್ರ ನಿವಾರಣೆ, ಸಂತಾನ, ಅನಾರೋಗ್ಯ, ಅತ್ತೆ-ಸೊಸೆ ಜಗಳ, ಮನೆಯಲ್ಲಿ ಕಿರಿಕಿರಿ ಇನ್ನೂ ಹಲವಾರು ಗುಪ್ತ ಸಮಸ್ಯೆಗಳಿಗೆ ಅತೀ ಶೀಘ್ರದಲ್ಲಿ ಪರಿಹಾರ, ನಿಮ್ಮ ಸಮಸ್ಯೆ ಯಾವುದೇ ಆಗಿರಲಿ ಒಂದು ಕರೆ ಮಾಡಿ.
98801 44819

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಕೆಲಸಕ್ಕೆ ಬೇಕಾಗಿದ್ದಾರೆ**
ಯಾವುದೇ ವಿದ್ಯಾರ್ಹತೆ ಹೊಂದಿರುವ ಡಿಟಿಪಿ, ಆಟೋಕ್ಯಾಡ್ ಹಾಗೂ ವಿಡಿಯೋ ಎಡಿಟಿಂಗ್ ಈ ಎಲ್ಲಾ ವಿಷಯಗಳ ಬಗ್ಗೆ ಹೆಚ್ಚಿನ ಅನುಭವವುಳ್ಳ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
**ಸಾಯಿ ವಿಶ್ವಕರ್ಮ ವುಡನ್ ಪ್ಯಾಲೇಸ್**
ಪಿ.ಬಿ. ರಸ್ತೆ, ದಾವಣಗೆರೆ.
89042 02483, 99727 51777

**ರಕ್ತ ದಾನ ಶ್ರೇಷ್ಠ ದಾನ**




**WANTED**
Female Candidate having the B.com with tally Required to work in sanitory and pipes distributer concern.
**B.G. Basavarajappa**
# 43H, SJJM Complex, Jayadeva Circle, Hadadi Road, Davangere.
99001 42052

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**REQUIRED**
**SOUTH INDIAN CHEF FOR OMAN( GULF)**
Looking for a smart South Indian/ Darshini style Head Chef required for South Indian Restaurant in MUSCAT. Good Salary + Accommodation.
Send CV to
**srdrsoratur1@gmail.com**
or Whats App only
+91- 9742521922

**ಕೆಲಸಕ್ಕೆ ಬೇಕಾಗಿದ್ದಾರೆ**
**ಎಸ್.ಆರ್. ಕನ್‌ಸ್ಟ್ರಕ್ಷನ್ಸ್**
**Tally** ಬರುವ ಹಾಗೂ ಯಾವುದೇ ಡಿಗ್ರಿ ಆಗಿರುವ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು ಮತ್ತು ಕಂಪ್ಯೂಟರ್ ಜ್ಞಾನವಿರುವವರು ಕೆಲಸಕ್ಕೆ ಬೇಕಾಗಿದ್ದಾರೆ.
ಸಮಯ : ಬೆ.: 10 ರಿಂದ ಸಂ. : 6
ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
76769 99539

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

**ದಾವಣಗೆರೆ : 2 & 3 ರಂದು**
**ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.**
**ಡಾ|| ಎಚ್.ಆಯ್. ದೊಡ್ಡಮನಿ** (G.R.No.8969)
ಡಮ್ಮಣಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

## 19ನೇ ವರ್ಷದ ಸವಿನೆನಪು



**ಹುಲಿಕಟ್ಟೆ ಕೆ.ಹೆಚ್. ರುದ್ರಪ್ಪನವರು**
(ಲ್ಯಾಂಡ್ ಡೆವಲಪರ್)
ನೀವು ನಮ್ಮನ್ನಗಲಿ ಇಂದಿಗೆ ಹತ್ತೊಂಬತ್ತು ವರ್ಷಗಳು ಕಳೆದರೂ, ಸದಾ ನಿಮ್ಮ ಸವಿನೆನಪಿನಲ್ಲಿರುವ,
ಪ್ರೀತಿಯ ತಾಯಿ-ತಂದೆ : ದಿ.ಗಿರಿಜಮ್ಮ ಲೇ|| ಹುಲಿಕಟ್ಟೆ ಕೆ. ಹಾಲಪ್ಪ, ಪತ್ನಿ : ಗಂಗಮ್ಮ
ಅಣ್ಣ-ತಮ್ಮಂದಿರು : ಶ್ರೀಮತಿ ಗೌರಮ್ಮ, ಶ್ರೀ ಹುಲಿಕಟ್ಟೆ ಕೆ.ಹೆಚ್. ಚನ್ನಬಸಪ್ಪ
ಶ್ರೀಮತಿ ಭಾಗ್ಯಮ್ಮ, ಶ್ರೀ ಹುಲಿಕಟ್ಟೆ ಕೆ.ಹೆಚ್. ಮಲ್ಲಿಕಾರ್ಜುನ್
ಶ್ರೀಮತಿ ಶೈಲಜಾ, ಹುಲಿಕಟ್ಟೆ ಕೆ.ಹೆಚ್. ಹಾಲೇಶ್
ಮಕ್ಕಳು : ಶ್ರೀಮತಿ ಶೃತಿ, ಶ್ರೀ ಹುಲಿಕಟ್ಟೆ ರಾಜೇಶ್
ಶ್ರೀಮತಿ ಪೂಜಾ, ಶ್ರೀ ಹುಲಿಕಟ್ಟೆ ಕಾರ್ತಿಕ್,
ಶ್ರೀಮತಿ ಅನಿತಾ, ಶ್ರೀಮಂತ್, ಶಶಿಕುಮಾರ್, ಯದುಕುಮಾರ್,
ಅಮಿತ್, ಚಂದನ್, ಮೊಮ್ಮಕ್ಕಳು : ರಿತಿಕಾ, ಗುಣವ್, ಪ್ರಹನ್, ಹಾದ್ವಿಕ್
ಹಾಗೂ ಹುಲಿಕಟ್ಟೆ ವಂಶಸ್ಥರು, ಬಂಧು-ಮಿತ್ರರು.

# ಜನಪ್ರಿಯ ಘೋಷಣೆ ರಹಿತ, ಬೆಳವಣಿಗೆ ಬಜೆಟ್

(1ನೇ ಪುಟದಿಂದ) ಸೀತಾರಾಮನ್, ಈ ವರ್ಗದವರಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ಇವರೆಲ್ಲರ ಉತ್ತಮ ಜೀವನಕ್ಕೆ ಬೆಂಬಲ ನೀಡಲಾಗಿದೆ. ಇವರ ಸಶಕ್ತೀಕರಣ ಹಾಗೂ ಕಾಳಜಿಯಿಂದ ದೇಶ ಮುನ್ನಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನೇರ ಹಾಗೂ ಪರೋಕ್ಷ ತೆರಿಗೆಯಲ್ಲಿ ಯಾವುದೇ ಬದಲಾವಣೆ ತಂದಿಲ್ಲ. ಆದರೆ, 2009-10ರವರೆಗಿನ 25 ಸಾವಿರ ರೂ.ಗಳವರೆಗಿನ ಆದಾಯ ತೆರಿಗೆ ಹಾಗೂ 2010-11ರಿಂದ 2014-15ರವರೆಗಿನ 10 ಸಾವಿರ ರೂ.ಗಳ ಆದಾಯ ತೆರಿಗೆ ಬೇಡಿಕೆಯನ್ನು ಕೈ ಬಿಡಲಾಗುವುದು. ಇದರಿಂದ ಒಂದು ಕೋಟಿ ತೆರಿಗೆದಾರರಿಗೆ ನೆರವಾಗಲಿದೆ.

ಬಂಡವಾಳ ವೆಚ್ಚವನ್ನು ಶೇ.11ರಷ್ಟು ಹೆಚ್ಚಿಸಿ 11.11 ಲಕ್ಷ ಕೋಟಿ ರೂ.ಗಳಿಗೆ ನಿಗದಿ ಪಡಿಸಲಾಗಿದೆ. ವಿತ್ತೀಯ ಕೊರತೆ 2024-25ರಲ್ಲಿ ಶೇ.5.1ರಷ್ಟಿರಲಿದೆ ಎಂದು ಅಂದಾಜಿಸಲಾಗಿದೆ. ಇದು ಪ್ರಸಕ್ತ ಹಣಕಾಸು ವರ್ಷದ ಶೇ.5.8ಕ್ಕಿಂತ ಕಡಿಮೆ.

ಮುಂದಿನ ಹಣಕಾಸು ವರ್ಷಕ್ಕಾಗಿ ಸರ್ಕಾರ 14.13 ಲಕ್ಷ ಕೋಟಿ ರೂ.ಗಳ ಸಾಲ ಪಡೆಯಲಿದೆ. ಇದು 2023-24ರ ಸಾಲವಾದ 15.43 ಲಕ್ಷ ಕೋಟಿ ರೂ.ಗಳಿಗಿಂತ ಕಡಿಮೆಯಾಗಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ಯಮಗಳ ಬಂಡವಾಳ ಹಿಂತೆಗೆತದಿಂದ 50 ಸಾವಿರ ಕೋಟಿ ರೂ.ಗಳನ್ನು ಪಡೆಯುವ ಗುರಿ ಹೊಂದಲಾಗಿದೆ. ಈ ವರ್ಷ 30 ಸಾವಿರ ಕೋಟಿ ರೂ.ಗಳ ಗುರಿ ಇತ್ತು.

ಮುಂದಿನ ಹಣಕಾಸು ವರ್ಷದಲ್ಲಿ ನೇರ ತೆರಿಗೆಯಿಂದ 21.99 ಲಕ್ಷ ಕೋಟಿ ರೂ. ಹಾಗೂ ಪರೋಕ್ಷ ತೆರಿಗೆಯಿಂದ 16.22 ಲಕ್ಷ ಕೋಟಿ ರೂ. ದೊರೆಯುವ ನಿರೀಕ್ಷೆ ಇದೆ.

ಯುವಕರಿಗೆ ಬಡ್ಡಿ ರಹಿತ ಸಾಲ ನೀಡಲು 1 ಲಕ್ಷ ಕೋಟಿ ರೂ.ಗಳ ನಿಧಿ ಸ್ಥಾಪಿಸಲಾಗುವುದು. ಬಂಡವಾಳ ವೆಚ್ಚಕ್ಕಾಗಿ ರಾಜ್ಯಗಳಿಗೆ ಸಾಲ ನೀಡುವ ಯೋಜನೆಯನ್ನು ಮುಂದುವರೆಸಲು ಹಾಗೂ ಇದಕ್ಕಾಗಿ 1.3 ಲಕ್ಷ ಕೋಟಿ ರೂ.ಗಳನ್ನು ಒದಗಿಸಲು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

## ವಿಕಸಿತ ಭಾರತಕ್ಕೆ ಬಜೆಟ್ 'ಗ್ಯಾರಂಟಿ'



ನವದೆಹಲಿ, ಫೆ. 1 – ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಬಜೆಟ್ ಸ್ವಾಗತಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಈ ಬಜೆಟ್ ವಿಕಸಿತ ಭಾರತದ ಅಡಿಪಾಯ ಬಲಗೊಳಿಸುವ ಗ್ಯಾರಂಟಿಯಾಗಿದೆ ಎಂದಿದ್ದಾರೆ.

ಈ ಬಜೆಟ್ ಭಾರತದ ಭವಿಷ್ಯ ರೂಪಿಸುತ್ತಿದೆ. ಇದು ಯುವಕರ ಆಶಯವನ್ನು ಬಿಂಬಿಸುತ್ತಿದೆ ಎಂದಿದ್ದಾರೆ.

ಈ ಬಜೆಟ್ ಮೂಲಕ ಯುವಕರು, ಬಡವರು, ಮಹಿಳೆಯರು ಹಾಗೂ ರೈತರು ಸಬಲೀಕರಣವಾಗಲಿದ್ದಾರೆ ಎಂದೂ ಪ್ರಧಾನಿ ಹೇಳಿದ್ದಾರೆ.

ವಿತ್ತೀಯ ಕೊರತೆಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲಾಗಿದೆ. ಒಟ್ಟಾರೆ ವೆಚ್ಚವನ್ನು ಈ ಬಜೆಟ್‌ನಲ್ಲಿ ದಾಖಲೆಯ 11,11,111 ಕೋಟಿ ರೂ.ಗಳಿಗೆ ತಲುಪಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ಸಂಶೋಧನೆ ಹಾಗೂ ಆವಿಷ್ಕಾರಗಳಿಗೆ 1 ಲಕ್ಷ ಕೋಟಿ ರೂ.ಗಳ ನಿಧಿ ಪ್ರಕಟಿಸಿರುವುದೂ ಸಹ ಐತಿಹಾಸಿಕ. ಇದರಿಂದ ನವೋದ್ಯಮಗಳಿಗೆ ಉತ್ತೇಜನ ದೊರೆಯಲಿದೆ. ಬಂಡವಾಳ ವೆಚ್ಚವನ್ನು 11.11 ಲಕ್ಷ ಕೋಟಿ ರೂ.ಗಳಿಗೆ ನಿಗದಿ ಪಡಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

## ಹೊನ್ನಾಳಿ ಅರ್ಬನ್ ಕ್ರೆಡಿಟ್ ಕೋ-ಆಪ್ ಸೊಸೈಟಿಗೆ ಅವಿರೋಧ ಆಯ್ಕೆ



ಹೊನ್ನಾಳಿ, ಫೆ. 1- ಪಟ್ಟಣದ ಹೊನ್ನಾಳಿ ಅರ್ಬನ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಡಾ.ಎಚ್.ಪಿ.ರಾಜಕುಮಾರ್ ಮತ್ತು ಉಪಾಧ್ಯಕ್ಷರಾಗಿ ಎಚ್.ವೀರೇಶಪ್ಪ ಅವಿರೋಧವಾಗಿ ಆಯ್ಕೆಯಾದರು.

ಸೊಸೈಟಿ ಕಚೇರಿಯಲ್ಲಿ ಗುರುವಾರ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಚುನಾವಣಾ ಅಧಿಕಾರಿ ನವೀನ್‌ಕುಮಾರ್ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಸೊಸೈಟಿ ನಿರ್ದೇಶಕರುಗಳಾದ ಎನ್. ಜಯರಾವ್, ಜಿ.ಆರ್.ಪ್ರಕಾಶ್, ಎಚ್.ಬಿ.ಮೋಹನ್, ಎಚ್.ಎಂ. ಅರುಣ್‌ಕುಮಾರ್, ಬಿ.ಎಚ್.ಉಮೇಶ್, ಕೆ.ಆರ್.ನಾಗರಾಜ್, ಎಚ್.ಎಂ.ಶಿವಮೂರ್ತಿ, ಸಿ.ಕೆ.ರವಿಕುಮಾರ್, ಎನ್.ಎನ್.ನಾಗರತ್ನ, ಎಚ್.ಕೆ.ರೂಪ, ಡಿ.ಎನ್.ಶಾಂತಲಾ, ಡಾ.ರಾಜಾನಾಯ್ಕ, ಎನ್. ಪ್ರಸಾದ್, ಕಾರ್ಯದರ್ಶಿ ಕುಮಾರ್ ಇದ್ದರು.

## ವಿನಾಯಕ ನಗರ ಕ್ಯಾಂಪಿನ ಹಾಲು ಉತ್ಪಾದಕರ ಸಂಘಕ್ಕೆ ಭಾಸ್ಕರ್ ಅಧ್ಯಕ್ಷ



ಮಲೇಬೆನ್ನೂರು, ಫೆ. 1 - ವಿನಾಯಕ ನಗರ ಕ್ಯಾಂಪಿನ (ಜಿಗಳಿ ಕ್ಯಾಂಪ್) ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಟಿ. ಭಾಸ್ಕರ್ ರಾವ್ ಹಾಗೂ ಉಪಾಧ್ಯಕ್ಷರಾಗಿ ಹೆಚ್. ಪಿ ಹನುಮಂತಪ್ಪ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಕೆ. ಜಬಿವುಲ್ಲಾ ಕಾರ್ಯನಿರ್ವಹಿಸಿದರು. ಸಂಘದ ನಿರ್ದೇಶಕ ಎನ್. ಪ್ರಸಾದ್ ರಾವ್, ಎನ್. ಸತ್ಯನಾರಾಯಣ, ಕೆ.ಎನ್. ವೀರಭದ್ರಪ್ಪ, ಜಿ. ಹನುಮಂತಪ್ಪ, ಸೀತಾರಾಮು, ಬಸವಣ್ಯಪ್ಪ, ಶ್ರೀಮತಿ ರತ್ನಮ್ಮ, ಶ್ರೀಮತಿ ದ್ಯಾಮವ್ವ, ವೆಂಕಟನಾರಾಯಣ ಮತ್ತು ಸಂಘದ ಮುಖ್ಯಕಾರ್ಯನಿರ್ವಾಹಕ ಡಿ.ಪಿ. ಚಿದಾನಂದ್ ಈ ವೇಳೆ ಹಾಜರಿದ್ದರು.

## ನಗರದಲ್ಲಿ ಇಂದು

ವಕ್ಕಲಿಗರ ಪೇಟೆಯ ವಿಜಯಲಕ್ಷ್ಮಿ ರಸ್ತೆಯಲ್ಲಿ ಶ್ರೀ ಹಾಲು ಚೌಡಮ್ಮ ದೇವಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಶ್ರೀ ಹಾಲು ಚೌಡಮ್ಮ ದೇವಿಯ ನೂತನ ವಿಗ್ರಹ ಪ್ರತಿಷ್ಠಾಪನೆ ಮಹೋತ್ಸವವು ಇಂದು ಶ್ರೀ ಮದುಜ್ಜಯಿನಿ ಜಗದ್ಗುರುಗಳ ಮತ್ತು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ನಡೆಯಲಿದೆ. ಇಂದು ಬೆಳಿಗ್ಗೆ ದೇವತಾ ಪ್ರತಿಷ್ಠೆ, ಪ್ರತಿಷ್ಠಾ ಹೋಮ, ಶಾಂತಿ ಹೋಮ, ಚಂಡಿಕಾ ಹೋಮ ಹಾಗೂ ಅನ್ನ ಸಂತರ್ಪಣೆ, ಸಂಜೆ ಶ್ರೀ ಕಾಳಿಕಾ ಭಜನಾ ಮಂಡಳಿಯವರಿಂದ ಕುಂಕುಮಾರ್ಚನೆ, ಲಲಿತಾ ಸಹಸ್ರನಾಮ ಪಠಣ, ಭಜನೆ ನಡೆಯಲಿದೆ.

## ಇಂದು ನಾಟ್ಯಭಾರತಿ ವಾರ್ಷಿಕ ಮಹೋತ್ಸವ

ದಾವಣಗೆರೆ - ನಾಟ್ಯಭಾರತಿ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಕಲಾಕೇಂದ್ರ, ತನ್ನ ಸಂಸ್ಥೆಯ 64ನೇ ವಾರ್ಷಿಕ ಮಹೋತ್ಸವವನ್ನು ಇಂದು ಸಂಜೆ 6:30ಕ್ಕೆ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಉದ್ಘಾಟಕ ರಾಗಿ ಎಸ್.ಎಸ್. ಕೇರ್ ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಆಗಮಿ ಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ್ ಆಗಮಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದುಷಿ ರಜನಿ ರಘು ನಾಥ್ ಕುಲಕರ್ಣಿ ವಹಿಸಲಿದ್ದಾರೆ. 2023ನೇ ಸಾಲಿನ ಜನವರಿ ತಿಂಗಳಿನಲ್ಲಿ ನಡೆದ ಭರತನಾಟ್ಯ ಜ್ಯೂನಿಯರ್ ಪರೀಕ್ಷೆಯಲ್ಲಿ ಅತ್ಯು ತ್ತಮ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವಿದ್ದು, ಕಲಾಕೇಂದ್ರದ ವಿದ್ಯಾರ್ಥಿಗಳಿಂದ ನೇಗಿಲಯೋಗಿ ಎಂಬ ವಿಶೇಷ ನೃತ್ಯ ರೂಪಕ ಪ್ರದರ್ಶನವಿದೆ.




## ಇನ್ನರ್ ವ್ಹೀಲ್ ದಿನಾಚರಣೆ

ದಾವಣಗೆರೆ, ಫೆ. 1 - ಇಲ್ಲಿನ ವಿದ್ಯಾನಗರದ ಮಾಗನೂರು ಬಸಪ್ಪ ರೋಟರಿ ಭವನದಲ್ಲಿ ಇನ್ನರ್ ವ್ಹೀಲ್ ಸಂಸ್ಥೆಯಿಂದ ಇನ್ನರ್‌ವ್ಹೀಲ್ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀಮತಿ ಮಂಜುಳಾ ಕರ್ಜಗಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ|| ಶೋಭಾ ಧನಂಜಯ ಉಪಸ್ಥಿತರಿದ್ದರು, ಈ ಸಂದರ್ಭದಲ್ಲಿ ಇನ್ನರ್ ವ್ಹೀಲ್ ಸಂಸ್ಥೆಯ 60 ವರ್ಷ ತುಂಬಿದ ಇಬ್ಬರನ್ನು ಸನ್ಮಾನಿಸಲಾಯಿತು. ಈ ಸಮಾರಂಭದಲ್ಲಿ ಸದಸ್ಯರಿಂದ ಕಿರು ನಾಟಕ, ನೃತ್ಯದಂತಹ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

### ಶ್ರೀಮತಿ ಸುಮಿತ್ರಮ್ಮ ನಿಧನ



ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ವಾಸಿ ನಾಗನೂರು ದಿ. ಮುರಿಗೇಂದ್ರಪ್ಪನವರ ಧರ್ಮಪತ್ನಿ ಶ್ರೀಮತಿ ಸುಮಿತ್ರಮ್ಮ (82) ಇವರು ದಿನಾಂಕ 01.02.2024ರಂದು ಗುರುವಾರ ಸಂಜೆ 4.45ಕ್ಕೆ ನಿಧನರಾದರು. ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 02.02.2024 ರಂದು ಶುಕ್ರವಾರ ಮಧ್ಯಾಹ್ನ 12.30ಕ್ಕೆ ಕುರ್ಕಿ ಗ್ರಾಮದಲ್ಲಿ ನೆರವೇರಲಿದೆ.

### ನೇತ್ರದಾನಿ ರಟ್ಟಿಹಳ್ಳಿ ನಾಗರಾಜ ಶೆಟ್ಟಿ ನಿಧನ




ದಾವಣಗೆರೆ ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಪಕ್ಕ, # 529/17 ವಾಸಿ, ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ನಿರ್ದೇಶಕರರಾದ ನೇತ್ರದಾನಿ ಶ್ರೀ ರಟ್ಟಿಹಳ್ಳಿ ನಾಗರಾಜ ಶೆಟ್ಟಿ (74) ಅವರು ದಿನಾಂಕ 1-2-2024ರ ಗುರುವಾರ ಸಂಜೆ 5-20ಕ್ಕೆ ದೈವಾಧೀನರಾದರು. ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 2-2-2024ರ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

## ಇಂದು ಎಎಪಿಯಿಂದ ಪ್ರತಿಭಟನೆ

ದಾವಣಗೆರೆ : ಬೆಳಗಾವಿಯ ಸೌಭಾಗ್ಯ ಲಕ್ಷ್ಮಿ ಶುಗರ್ಸ್ ಕಂಪನಿಯ ಮಾಲೀಕ, ಶಾಸಕ ರಮೇಶ್ ಜಾರಕಿಹೊಳಿ ಹಾಗೂ ಇತರೆ ಇಬ್ಬರು ನಿರ್ದೇಶಕರ 439 ಕೋಟಿ ರೂ., ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಂತೆ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಮ್ ಆದ್ಮಿ ಪಾರ್ಟಿ ಜಿಲ್ಲಾ ಘಟಕ ಸರ್ಕಾರಕ್ಕೆ ಆಗ್ರಹಿಸಿ ಮತ್ತು ತಕ್ಷಣ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಇಂದು ಶುಕ್ರವಾರ ಬೆಳಿಗ್ಗೆ 11-45ಕ್ಕೆ ನಗರದ ಜಯದೇವ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

## ನಗರದಲ್ಲಿ ಇಂದು ಶ್ರೀದೇವಿ ಮಂತ್ರ ದೀಕ್ಷಾ, ಧ್ಯಾನ ಶಿಬಿರ



ನಗರದ ಚಿದಂಬರ ಸೇವಾ ಫೌಂಡೇಷನ್, ಭಗವತಿ ಚೈತನ್ಯ ಚಿಕಿತ್ಸೆ ಮತ್ತು ಧ್ಯಾನ ಕೇಂದ್ರದ ಆಶ್ರಯದಲ್ಲಿ ಇಂದಿನಿಂದ ಪ್ರತೀ ಶುಕ್ರವಾರ ಸಂಜೆ 6 ರಿಂದ 7.30ರವರೆಗೆ ವಿದ್ಯಾನಗರದ ಶ್ರೀ ಶಿವ-ಪಾರ್ವತಿ ದೇವಸ್ಥಾನದ ಸಭಾಂಗಣದಲ್ಲಿ ಶ್ರೀದೇವಿ ಮಂತ್ರ ದೀಕ್ಷಾ ಮತ್ತು ಧ್ಯಾನ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಶಿಬಿರ ನಡೆಸಿಕೊಡುವ ಗುರುಗಳಾದ ಅಘೋರಿ ಚಿದಂಬರ ಹಿಮಾಲಯ ಯೋಗಿಯವರು ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 93503 89236, 74111 40666.

## ಮಲೇಬೆನ್ನೂರಿನಲ್ಲಿ ಇಂದು ಗ್ಯಾರಂಟಿ ಫಲಾನುಭವಿಗಳ ಸಮಾವೇಶ

ಇಲ್ಲಿನ ಬಸವೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಸರ್ಕಾರದ ಗ್ಯಾರಂಟಿ ಯೋಜನೆಗಳ ಅರ್ಹ ಫಲಾನುಭವಿಗಳ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎ.ಸುರೇಶ್ ತಿಳಿಸಿದ್ದಾರೆ. ಅಧ್ಯಕ್ಷತೆ : ಶಾಸಕ ಬಿ.ಪಿ.ಹರೀಶ್.

## ಸಹಾಯಕಿಯರಿಗೆ ಎರಡು ಸೀರೆ

(1ನೇ ಪುಟದಿಂದ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯದ ವತಿಯಿಂದ ಮೈಸೂರು ಹಾಗೂ ಕಲಬುರಗಿಯಲ್ಲಿ ಅಲೈಡ್ ಹೆಲ್ತ್ ಸೈನ್ಸ್ ಕಾಲೇಜುಗಳನ್ನು ಅಂದಾಜು 100 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲು ಸಂಪುಟ ಒಪ್ಪಿಗೆ ನೀಡಿದೆ.

ನಬಾರ್ಡ್ ನೆರವಿನೊಂದಿಗೆ ರಾಜ್ಯದ ಆರು ಜಿಲ್ಲೆಗಳಲ್ಲಿ ಬಹು ಉತ್ಪನ್ನ ಶೀಥಲ ಗೃಹಗಳನ್ನು 65.97 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ರಾಜ್ಯದ ಆರು ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು 100 ಕೋಟಿ ರೂ. ವೆಚ್ಚದಲ್ಲಿ ಉನ್ನತೀಕರಿಸಲು ಸಭೆ ಸಮ್ಮತಿಸಿದೆ. ಮೈಸೂರು, ಕಲಬುರಗಿ, ಬೆಂಗಳೂರು, ರಾಯಚೂರು, ಬಳ್ಳಾರಿ ಹಾಗೂ ವಿಜಯಪುರ ತರಬೇತಿ ಸಂಸ್ಥೆಗಳಲ್ಲಿ ಉನ್ನತೀಕರಣ ನಡೆಯಲಿದೆ.

ರಾಜ್ಯದ 104 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ 60 ಕೋಟಿ ರೂ. ವೆಚ್ಚದಲ್ಲಿ ಕಲಿಕಾ ವಾತಾವರಣ ಅಭಿವೃದ್ಧಿಗೆ ಸಂಪುಟ ಅನುಮತಿ ನೀಡಿದೆ.

ವಿಧಾನಮಂಡಲದ ಉಭಯ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಲಿರುವ ಭಾಷಣಕ್ಕೆ ಸಂಪುಟ ಅನುಮೋದನೆ ನೀಡಿದೆ.

ಫೆಬ್ರವರಿ 12ರಿಂದ ವಿಧಾನಮಂಡಲದ ಬಜೆಟ್ ಅಧಿವೇಶನ ಆರಂಭಗೊಳ್ಳಲಿದ್ದು, ಮೊದಲ ದಿನ ರಾಜ್ಯಪಾಲರು ಜಂಟಿ ಸದನಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಫೆಬ್ರವರಿ 16 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ, 2024-25ನೇ ಸಾಲಿನ ರಾಜ್ಯ ಮುಂಗಡ ಪತ್ರ ಮಂಡಿಸಲಿದ್ದಾರೆ.

## ಇಂದು ವಚನ ಶಿಬಿರ, ಪಂಚಾಕ್ಷರಿ ಗವಾಯಿಗಳ ಜಯಂತಿ, ಕವಿಗೋಷ್ಠಿ

ಡಾ. ಪಂಡಿತ ಪುಟ್ಟರಾಜ ಸೇವಾ ಸಮಿತಿ ಗದಗ, ಜಿಲ್ಲಾ ಮಹಿಳಾ ಘಟಕ, ದಾವಣಗೆರೆ ಜಿಲ್ಲಾ ವಚನಾಮೃತ ಬಳಗ ಇವರ ಸಹಯೋಗದಲ್ಲಿ ಇಂದು ಮಧ್ಯಾಹ್ನ 2.30 ಕ್ಕೆ ಹಳೇ ದಾವಣಗೆರೆ ದುಗ್ಗಮ್ಮ ದೇವಸ್ಥಾನದ ಎದುರಿಗಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ವಚನ ಶಿಬಿರ, ಪಂಚಾಕ್ಷರಿ ಗವಾಯಿಗಳ ಜಯಂತಿ ಹಾಗೂ ಕವಿಗೋಷ್ಠಿ ಏರ್ಪಡಿಸಲಾಗಿದೆ. ಡಾ.ಪಂಡಿತ್ ಪುಟ್ಟರಾಜ ಸೇವಾ ಸಮಿತಿ ಅಧ್ಯಕ್ಷೆ ಸೌಮ್ಯ ಸತೀಶ್ ಧಾರವಾಡ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ವಡೇರಹಳ್ಳಿ ಸಂಗೀತ ಶಿಕ್ಷಕ ಶಿವಬಸವಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷ ಹೆಚ್.ಆರ್.ನಿಂಗರಾಜ್, ಮುಖ್ಯ ಶಿಕ್ಷಕಿ ಕಲ್ಲಮ್ಮ, .ಡಾ. ಪಂಡಿತ ಪುಟ್ಟರಾಜ ಸೇವಾ ಸಮಿತಿ ಜಿಲ್ಲಾಧ್ಯಕ್ಷ ಪಿ.ಬಿ. ವಿನಾಯಕ ಮತ್ತಿತರರು ಭಾಗವಹಿಸಲಿದ್ದಾರೆ.

## ಚೀಪ್ ಗಿಮಿಕ್ ಮಾಡದೇ ಭಾರತದ ಅಭಿವೃದ್ಧಿ ಪರವಾದ ಆಯವ್ಯಯ



ಚುನಾವಣೆ ಸಮೀಪವಿದ್ದಾಗಲೂ ಯಾವುದೇ ಚೀಪ್ ಗಿಮಿಕ್ ಮಾಡದೇ ಭಾರತದ ಅಭಿವೃದ್ಧಿ ಪರವಾದ ಆಯವ್ಯಯವನ್ನು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಂಡಿಸಿದೆ.

ಭಾರತವನ್ನು ಆಳಿದ ಬ್ರಿಟಿಷರನ್ನು ಹಿಂದಿಕ್ಕಿ ನಮ್ಮ ದೇಶವೀಗ ಜಗತ್ತಿನ ಐದನೇ ಆರ್ಥಿಕ ಶಕ್ತಿಯಾಗಿ ಬೆಳೆದಿದೆ. ಕಳೆದ 9 ವರ್ಷಗಳಿಂದ ದೇಶದ 25 ಕೋಟಿಗೂ ಹೆಚ್ಚು ಜನರು ಬಡತನ ರೇಖೆಯಿಂದ ಹೊರಬಂದು, ಆರ್ಥಿಕವಾಗಿ ಸಬಲರಾಗಿದ್ದಾರೆ. ಇಂತಹ ನೂರೆಂಟು ಮೈಲಿಗಲ್ಲುಗಳು ಮೋದಿಯವರ ಸಾರಥ್ಯದ ಬಜೆಟ್ ಮತ್ತು ಜನಪರ ಕಾರ್ಯಕ್ರಮಗಳ ಮೂಲಕ ಸಾಧ್ಯವಾಗಿದೆ.

ಮೂರನೇ ಬಾರಿ ಮೋದಿ ಸರ್ಕಾರ ಆಯ್ಕೆ ಆಗಲಿದ್ದು, ಜೂನ್ ತಿಂಗಳಲ್ಲಿ ಪೂರ್ಣಾವಧಿ ಬಜೆಟ್ ಮಂಡಿಸಿ, ದೇಶದ ಪ್ರಗತಿಗೆ ಇನ್ನಷ್ಟು ಹೊಸ ವೇಗ ತರುವುದು ಖಚಿತ. ದೂರದೃಷ್ಟಿ ಮತ್ತು ಅಭಿವೃದ್ಧಿಯ ರೂಪುರೇಷೆಯ ಆಯವ್ಯಯ ನೀಡಿದ ಕೇಂದ್ರ ಸರ್ಕಾರಕ್ಕೆ ದಾವಣಗೆರೆ ಜಿಲ್ಲೆಯ ಜನತೆಯ ಪರವಾಗಿ ದಾವಣಗೆರೆ ಬಿಜೆಪಿ ಲೋಕಸಭಾ ಕ್ಷೇತ್ರದ ಆಕಾಂಕ್ಷಿ ಡಾ. ರವಿಕುಮಾರ್ ಟಿ.ಜಿ. ಕೃತಜ್ಞತೆ ಸಲ್ಲಿಸಿದ್ದಾರೆ.

## ಮಲೇಬೆನ್ನೂರಿನಲ್ಲಿ ಕ್ರಿಕೆಟ್ ಟೂರ್ನಿ



ಮಲೇಬೆನ್ನೂರು, ಫೆ.1- ಇಲ್ಲಿನ ನೀರಾವರಿ ಇಲಾಖೆಯ ಮೈದಾನದಲ್ಲಿ ಎ.ಕೆ.ಸ್ಪೋರ್ಟ್ಸ್ ವತಿಯಿಂದ ಹಮ್ಮಿಕೊಂಡಿದ್ದ ಮಲೇಬೆನ್ನೂರು ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯನ್ನು ಜಿ.ಪಂ. ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ ಬ್ಯಾಟಿಂಗ್ ಮಾಡುವ ಮೂಲಕ ಉದ್ಘಾಟಿಸಿದರು. ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಗೌಡ್ರ ಮಂಜಣ್ಣ, ಬಿ. ಮಂಜುನಾಥ್, ಓ.ಜಿ.ಕುಮಾರ್, ಪಿ.ಆರ್.ರಾಜು, ಪಾನಿಪೂರಿ ರಂಗಣ್ಣ, ಬಸ್ ಪುಟ್ಟಣ್ಣ, ಎ.ಕೆ.ಲೋಕೇಶ್, ಕಿರಣ್, ಮೈತ್ರಿ, ಭೋವಿ ಮಂಜಣ್ಣ, ಜಿಗಳಿಯ ಕೆ.ಜಿ.ಬಸವರಾಜ್, ಹೆಚ್.ಬಿ.ವೀರೇಶ್ ಮತ್ತಿತರರು ಹಾಜರಿದ್ದರು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಕೇಂದ್ರದ ಬಜೆಟ್ ಪ್ರಗತಿ ನಿಷ್ಠ : ಯಡಿಯೂರಪ್ಪ ಸ್ವಾಗತ



ಬೆಂಗಳೂರು ಫೆ. 1 - ಕೇಂದ್ರದ ಮಧ್ಯಂತರ ಬಜೆಟ್ ರಾಷ್ಟ್ರದ 'ಪ್ರಗತಿ ನಿಷ್ಠ ಬಜೆಟ್' ಎಂದು ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಸ್ವಾಗತಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ನವಭಾರತ ಪರಿಕಲ್ಪನೆಯ ಸಾಕಾರದ ನಿಟ್ಟಿನಲ್ಲಿ, ದೇಶದ ಆರ್ಥಿಕತೆಯನ್ನು ಮತ್ತಷ್ಟು ಸದೃಢಗೊಳಿಸುವ ಬಜೆಟ್ ಮಂಡನೆಯಾಗಿದೆ ಎಂದಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟಾ ಶ್ರೀನಿವಾಸ ಪೂಜಾರಿ, ಕೇಂದ್ರದ ಮಧ್ಯಂತರ ಬಜೆಟ್ಟನ್ನು ಸ್ವಾಗತಿಸಿದ್ದು, ಭಾರತ ತಂತ್ರಜ್ಞಾನ ಹಾಗೂ ಆರ್ಥಿಕತೆಯ ಏಳಿಗೆಗೆ ಮಂಡಿಸಿರುವ ಬಜೆಟ್ ಇದಾಗಿದೆ ಎಂದು ಬಣ್ಣಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಇಂದು ಮಂಡಿಸಿದ ಮಧ್ಯಂತರ ಬಜೆಟ್ ಸ್ವಾಗತಿಸಿದ್ದಾರೆ.

ಕೃಷಿ ವಲಯ ಮತ್ತು ಕೃಷಿಧಾನ್ಯಗಳ ಬೆಳೆಗೆ ಉತ್ತೇಜನ, ಉದ್ಯೋಗ ಸೃಷ್ಟಿ, ಯುವ ಉದ್ಯಮಿಗಳಿಗೆ ಪ್ರೋತ್ಸಾಹ, ಉತ್ಪಾದನೆಗೆ ಒತ್ತು ಇತ್ಯಾದಿ ಕ್ರಮಗಳು ಸೇರಿದಂತೆ, ರಾಜ್ಯದ ಕರಾವಳಿ ಪ್ರವಾಸೋದ್ಯಮ ಬೆಳವಣಿಗೆಗೆ ಮನ್ನಣೆ ನೀಡಲಾಗಿದೆ ಎಂದವರು ಹೇಳಿದ್ದಾರೆ.

ಇದೊಂದು ಜನಪರ, ಅಭಿವೃದ್ಧಿಪರ ಹಾಗೂ ವಿಕಾಸಪೂರಕ ಬಜೆಟ್, ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿ ಈ ಆಯವ್ಯಯದಲ್ಲಿ ಅಡಗಿದೆ. ಹಿಂದಿನ ಐದು ವರ್ಷದ ಆಡಳಿತದಲ್ಲಿ ಯಾವ ವಲಯಕ್ಕೆ ಶಕ್ತಿ ತುಂಬಿದ್ದೇವೆ ಎನ್ನುವ ಮಾಹಿತಿಯನ್ನು ಹಣಕಾಸು ಸಚಿವರು ನೀಡಿದ್ದಾರೆ.

ಯುವಜನತೆ ಸೇರಿ ಹಲವು ವರ್ಗಕ್ಕೆ ಹೆಚ್ಚಿನ ಆರ್ಥಿಕ ಶಕ್ತಿ ನೀಡುವ ಭರವಸೆ ನೀಡಿದ್ದಾರೆ, ಉತ್ಪಾದನಾ ಕ್ಷೇತ್ರದ ಅಭಿವೃದ್ಧಿಗೆ ಇಂಬು ಕೊಡಲಾಗಿದೆ ಎಂದವರು ಹೇಳಿದ್ದಾರೆ.

ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಂದಿನ ದಿನಗಳಲ್ಲಿ ಕೇಂದ್ರ ಬಿಜೆಪಿ ನಾಯಕರ ಜತೆ ಮುಕ್ತವಾಗಿ ಚರ್ಚೆ ಮಾಡಲಾಗುವುದು. ಇದು ಮಧ್ಯಂತರ ಬಜೆಟ್ ಆದ್ದರಿಂದ ಚುನಾವಣೆ ಬಳಿಕ ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವೆ, ರಾಜ್ಯದ ಸಮಸ್ಯೆಗಳ ಬಗ್ಗೆ ಅರಿವಿದೆ. ಎಲ್ಲಿ ಅನ್ಯಾಯ ವಾಗಿದೆಯೋ ಅದೆಲ್ಲವನ್ನೂ ಸರಿಮಾಡುವಲ್ಲಿ ಕೇಂದ್ರದ ಮನವೊಲಿಸುತ್ತೇವೆ ಎಂದರು.

# ಆಶಾದಾಯಕ ಮತ್ತು ಚುನಾವಣಾ ಪೂರ್ವ ಮುಂಗಡ ಪತ್ರ : ರಾಧೇಶ್ ಜಂಬಗಿ



ದಾವಣಗೆರೆ, ಫೆ. 1 - 2024-25ನೇ ಸಾಲಿನ 2 ತಿಂಗಳ ಲೇಖಾನುದಾನ ಮುಂಗಡ ಪತ್ರ ಮಂಡಿಸಿದ್ದು ಶ್ರೀ ಸಾಮಾನ್ಯನಿಗೆ ಆಶಾದಾಯಕವಾಗಿದ್ದು, ಆದಾಯ ತೆರಿಗೆಯಲ್ಲಿ ಹೊಸ ಮತ್ತು ಹಳೆಯ ತೆರಿಗೆ ಪದ್ಧತಿಯಲ್ಲಿ ಯಾವುದೇ ರೀತಿಯ ಮಾರ್ಪಾಡುಗಳನ್ನು ಮಾಡದೇ ಇರುವುದು ಮದ್ಯಮ ವರ್ಗದ ಮತ್ತು ಸಂಬಳದಾರರಿಗೆ ಅನುಕೂಲವಾಗಿರುತ್ತದೆ ಮತ್ತು ಕರ್ನಾಟಕ ರಾಜ್ಯಕ್ಕೆ ಅದರಲ್ಲೂ ಬೆಂಗಳೂರಿಗೆ ವರದಾನವಾಗಿದೆ.

ರಕ್ಷಣಾ ಇಲಾಖೆಗೆ ಹೆಚ್ಚಿನ ಹಣ ಕ್ರೋಢೀಕರಿಸಿದ್ದು ಗಡಿ ಭಾಗದ ಸೈನಿಕರಿಗೆ ಆಶಾದಾಯಕವಾಗಿದೆ, ಅದರಲ್ಲಿ ಹೆಚ್ಚಿನ ರೀತಿಯ ಅನುಕೂಲತೆಗಳನ್ನು ರಕ್ಷಣಾ ಸೈನಿಕರಿಗೆ ಕೊಟ್ಟಿರುವುದು ಆಶಾದಾಯಕ.

ಮೇಕ್-ಇನ್-ಇಂಡಿಯಾ ಕಳೆದ ವರ್ಷದಿಂದ ಹಣವನ್ನು ಕ್ರೋಢೀಕರಿಸಿ ಒSಒಇ ಅಡಿಯಲ್ಲಿ ದಾಖಲಾತಿಯ ಕೈಗಾರಿಕೋದ್ಯಮ ಕಾರ್ಯಗತವಾಗಿದ್ದು ಶುಭಸೂಚನೆಯಾಗಿದೆ.

ಜಿ.ಎಸ್.ಟಿ ಯಲ್ಲಿ 2017-18, 2018-19 ರ ಸಾಲಿಗೆ ಕ್ಷಮಾದಾನ ಯೋಜನೆ ಪ್ರಕಟಿಸದಿರುವುದು ನಿಜಕ್ಕೂ ಶೋಚನೀಯ, ಇದನ್ನು ಮುಂದಿನ ದಿನಗಳಲ್ಲಿ ಕ್ಷಮಾದಾನ ಯೋಜನೆ ತಂದಲ್ಲಿ ವ್ಯಾಪಾರಸ್ತರು ಕೈಗಾರಿಕೋದ್ಯಮಿಗಳಿಗೆ ಸರಕು ಮತ್ತು ಸೇವಾ ತೆರಿಗೆ ಕಟ್ಟುವಲ್ಲಿ ಹೆಚ್ಚುವರಿ ಅನುಕೂಲ ಕೊಟ್ಟಂತಾಗುತ್ತದೆ.

ಒಟ್ಟು 2024-25ನೇ ಸಾಲಿಗೆ ಕೇಂದ್ರ ಸರ್ಕಾರದ 2 ತಿಂಗಳ ಲೇಖಾನುದಾನ ಮುಂಗಡ ಪತ್ರ ಆಶಾದಾಯಕ ಮತ್ತು ಚುನಾವಣಾ ಪೂರ್ವ ಲೇಖಾನುದಾನ ಮುಂಗಡ ಪತ್ರವಾಗಿರುತ್ತದೆ ಎಂದು ದಾವಣಗೆರೆ ತೆರಿಗೆ ಸಲಹೆಗಾರರ ಸಂಘದ ಅಧ್ಯಕ್ಷ ಜಂಬಗಿ ರಾಧೇಶ್ ತಿಳಿಸಿದ್ದಾರೆ

# 2014ರ ಮೊದಲಿನ ಆರ್ಥಿಕ ಅವ್ಯವಸ್ಥೆ ಬಗ್ಗೆ ಶ್ವೇತ ಪತ್ರ : ನಿರ್ಮಲ

## ತಪ್ಪುಗಳಿಂದ ಪಾಠ ಕಲಿಯಲು ಕ್ರಮ ಎಂದ ಕೇಂದ್ರ ಸರ್ಕಾರ



ನವದೆಹಲಿ, ಫೆ. 1 – 2014ಕ್ಕೆ ಮೊದಲಿನ ಆರ್ಥಿಕ ನಿರ್ವಹಣೆಯಲ್ಲಿ ಆದ ಅವ್ಯವಸ್ಥೆಯ ಕುರಿತು ಕೇಂದ್ರ ಸರ್ಕಾರ ಶ್ವೇತ ಪತ್ರ ಪ್ರಕಟಿಸಲಿದೆ.

ಬಜೆಟ್ ಮಂಡನೆ ವೇಳೆ ಈ ವಿಷಯ ತಿಳಿಸಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಪಾಠಗಳನ್ನು ಕಲಿಯುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದಿದ್ದಾರೆ.

2014ರಲ್ಲಿ ನರೇಂದ್ರ ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಅದಕ್ಕೂ ಮುಂಚೆ ಹತ್ತು ವರ್ಷ ಕಾಲ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರ ಅಧಿಕಾರದಲ್ಲಿತ್ತು.

2014ರವರೆಗೆ ನಾವು ಎಲ್ಲಿದ್ದೆವು ಎಂಬುದರ ಕಡೆ ಕಣ್ಣು ಹಾಯಿಸುವುದು ಸೂಕ್ತವಾಗಿದೆ. ಹಿಂದಿನ ವರ್ಷಗಳಲ್ಲಿ ಆದ ಅವ್ಯವಸ್ಥೆಯಿಂದ ಪಾಠ ಕಲಿಯಲು ಶ್ವೇತ ಪತ್ರ ಪ್ರಕಟಿಸಲಾಗುವುದು ಎಂದು ಸೀತಾರಾಮನ್ ತಿಳಿಸಿದ್ದಾರೆ.

2014ರಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆರ್ಥಿಕತೆಯನ್ನು ಹಂತ ಹಂತಗಳಲ್ಲಿ ಸರಿಪಡಿಸಲಾಯಿತು. ಆಡಳಿತ ವ್ಯವಸ್ಥೆಗೆ ಅಪಾರ ಒತ್ತು ಕೊಡಲಾಯಿತು ಎಂದವರು ತಿಳಿಸಿದ್ದಾರೆ.

ಆ ಸಂದರ್ಭದಲ್ಲಿ ಜನರಿಗೆ ಆಶಾಭಾವನೆ ನೀಡುವುದು, ಹೂಡಿಕೆ ಆಕರ್ಷಿಸುವುದು ಹಾಗೂ ಸುಧಾರಣೆಗಳಿಗೆ ಬೆಂಬಲಿಸುವುದು ಅಗತ್ಯವಾಗಿತ್ತು. ಸರ್ಕಾರ ಆ ಕ್ರಮಗಳಲ್ಲಿ ಯಶಸ್ವಿಯಾಗಿದೆ. ದೇಶವೇ ಮೊದಲು ಎಂಬ ಬಲಿಷ್ಠ ಭಾವನೆಯ ಕಾರಣದಿಂದಾಗಿ, ಸರ್ಕಾರ ಯಶಸ್ಸು ಗಳಿಸಿದೆ ಎಂದವರು ಹೇಳಿದರು.

ಆ ಸಂಕಷ್ಟ ಕಾಲದಿಂದ ನಾವು ಹೊರ ಬಂದಿದ್ದೇವೆ. ಆರ್ಥಿಕತೆ ಈಗ ದೃಢವಾಗಿದೆ. ಸರ್ವಾಂಗೀಣ ಬೆಳವಣಿಗೆಗೆ ಸುಸ್ಥಿರತೆ ಪಡೆದುಕೊಂಡಿದೆ ಎಂದೂ ಸೀತಾರಾಮನ್ ಹೇಳಿದರು.

ಕಳೆದ ಹತ್ತು ವರ್ಷಗಳಲ್ಲಿ ಭಾರತದ ಆರ್ಥಿಕತೆ ಬೃಹತ್ ಸಕಾರಾತ್ಮಕ ರೂಪಾಂತರಣ ಕಂಡಿದೆ. ಜನರು ಭವಿಷ್ಯವನ್ನು ಆಶಾಭಾವನೆ ಹಾಗೂ ಸಕಾರಾತ್ಮಕತೆಯಿಂದ ನೋಡುತ್ತಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

# ಚುನಾವಣಾ ವರ್ಷದ ಬಜೆಟ್‌ನಲ್ಲಿ 'ಶಿಸ್ತು' ಬಿಡದ ಸೀತಾರಾಮನ್ : ಮುಂದಿನ ವರ್ಷದ ಕೊರತೆ ಗುರಿ ಶೇ.5.1

ನವದೆಹಲಿ, ಫೆ. 1 – ವಿತ್ತೀಯ ಶಿಸ್ತಿನ ಹಾದಿಯಲ್ಲಿ ಮುನ್ನಡೆಯುವುದಾಗಿ ಹೇಳಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಮುಂದಿನ ಹಣಕಾಸು ವರ್ಷದ ವಿತ್ತೀಯ ಕೊರತೆಯನ್ನು ಶೇ.5.1ಕ್ಕೆ ನಿಗದಿ ಪಡಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ.5.9ರ ವಿತ್ತೀಯ ಕೊರತೆ ಅಂದಾಜಿತ್ತು. ಆದರೆ, ಶೇ.5.8 ರ ವಿತ್ತೀಯ ಕೊರತೆ ನಿಭಾಯಿಸುವಲ್ಲಿ ಸರ್ಕಾರ ಯಶಸ್ಸು ಕಂಡಿದೆ.

ಮುಂದಿನ ಒಂದೆರಡು ತಿಂಗಳಲ್ಲೇ ಲೋಕಸಭಾ ಚುನಾವಣೆ ನಡೆಯಲಿದೆ. ಆದರೂ, ಸರ್ಕಾರ ಯಾವುದೇ ಜನಪ್ರಿಯ ಯೋಜನೆಗಳನ್ನು ಪ್ರಕಟಿಸಲು ಮುಂದಾಗಿಲ್ಲ. ವಿತ್ತೀಯ ಶಿಸ್ತಿಗೆ ಸರ್ಕಾರ ಅಂಟಿಕೊಂಡಿದೆ.

2025-26ರ ವೇಳೆಗೆ ಶೇ.4.5ರ ವಿತ್ತೀಯ ಕೊರತೆಯ ಗುರಿ ತಲುಪಲು ಸರ್ಕಾರ ಯೋಜಿಸಿದೆ. ಇದಕ್ಕಾಗಿ ವಿತ್ತೀಯ ಹೊಣೆಗಾರಿಕೆ ಹಾಗೂ ಬಜೆಟ್ ನಿರ್ವಹಣೆ ಕಾಯ್ದೆಯನ್ನು ರೂಪಿಸಲಾಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ 17,34,773 ಕೋಟಿ ರೂ.ಗಳ ವಿತ್ತೀಯ ಕೊರತೆಯ ಅಂದಾಜಿತ್ತು. ವಾಸ್ತವಿಕ ವಿತ್ತೀಯ ಕೊರತೆ 16,85,494 ಕೋಟಿ ರೂ. ಆಗಿದೆ.

# ಅಚ್ಚರಿಯ ಕೇಂದ್ರದ ಬಜೆಟ್: ಅರುಣ್‌ಕುಮಾರ್




ಲೋಕಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಎಲ್ಲಾ ವರ್ಗಕ್ಕೂ ಬಂಪರ್ ಕೊಡುಗೆ ನೀಡಲಾಗುತ್ತದೆ ಎನ್ನುವ ನಿರೀಕ್ಷೆ ಎಲ್ಲರಲ್ಲೂ ಇತ್ತು. ಆದರೆ, ಕೇಂದ್ರದ ಆಯವ್ಯಯದಲ್ಲಿ ಯಾವುದೇ ಹೊಸ ಘೋಷಣೆ ಮಾಡಿಲ್ಲ. ಈ ಬಜೆಟ್ ಯಾರಿಗೆ ಏನು ಸಿಕ್ಕಿತು ಎಂಬುದಕ್ಕೆ ಪುರಾವೆ ಇಲ್ಲದಂತಾಗಿದೆ ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್ ಪ್ರತಿಕ್ರಿಯಿಸಿದ್ದಾರೆ. ಮಧ್ಯಂತರ ಬಜೆಟ್ ಆದಕಾರಣ ಮುಂದೆ ಸರ್ಕಾರ ರಚನೆ ಮಾಡಿದ ನಂತರ ಮತ್ತೊಂದು ಬಜೆಟ್ ಮಂಡಿಸಿದರಾಯಿತು ಎಂದು ಭಾವಿಸಿರುವ ಕೇಂದ್ರ ಸರ್ಕಾರ ಆದಾಯ ತೆರಿಗೆಯನ್ನು ಯಥಾಸ್ಥಿತಿ ಕಾಯ್ದುಕೊಂಡು ಕಾರ್ಪೊರೇಟ್ ತೆರಿಗೆ ಇಳಿಕೆ ಮಾಡಿರುವುದು ವಿಪರ್ಯಾಸ. ಕೃಷಿ ಕ್ಷೇತ್ರದ ಬಗ್ಗೆ ಪ್ರಸ್ತಾಪ ಇಲ್ಲ. ಯಾವುದೇ ವಿನಾಯತಿ, ಜಯಪ್ರಿಯ ಘೋಷಣೆ ಇಲ್ಲದ ಬಜೆಟ್ ಇದಾಗಿದೆ ಎಂದು ಹೇಳಿದ್ದಾರೆ.

# ರೈತ - ಜನಸ್ನೇಹಿ ಬಜೆಟ್ : ಸತೀಶ್



4 ಕೋಟಿ ರೈತರಿಗೆ ಪಿಎಂ ಫಸಲ್ ಬಿಮಾ ಯೋಜನೆಯ ಲಾಭ, ಆಹಾರ ಧಾನ್ಯ ಸಂಸ್ಕರಣೆ ಮತ್ತು ಶೇಖರಣೆಗೆ ಖಾಸಗಿ ಬಂಡವಾಳಕ್ಕೆ ಅವಕಾಶ, ನ್ಯಾನೋ ಯೂರಿಯಾ ನಂತರ ನ್ಯಾನೋ ಡಿಎಪಿ ರಸಗೊಬ್ಬರ ಉತ್ಪಾದನೆ, ಆತ್ಮನಿರ್ಭರ ಎಣ್ಣೆ ಬೀಜ ಅಭಿಯಾನ ಜಾರಿ, ಸೋಲಾರ್ ಶಕ್ತಿ ಮೂಲಕ 1 ಕೋಟಿ ಮನೆಗಳಿಗೆ ಉಚಿತ ವಿದ್ಯುತ್ ಮುಂತಾದ ಹೊಸ ಆವಿಷ್ಕಾರಗಳೊಂದಿಗೆ ಇಂದು ಮಂಡನೆ ಯಾಗಿರುವ ಕೇಂದ್ರದ ಬಜೆಟ್ ರೈತ-ಜನಸ್ನೇಹಿ ಬಜೆಟ್ ಎಂದು ಬಿಜೆಪಿ ಮುಖಂಡ ಬಿ.ಎಂ. ಸತೀಶ್ ಕೊಳೇನಹಳ್ಳಿ ತಿಳಿಸಿದ್ದಾರೆ.

# ಆತ್ಮವಿಶ್ವಾಸದ ಬಜೆಟ್



ವಿತ್ತೀಯ ಕೊರತೆಯನ್ನು ಶೇ.5.1ಕ್ಕೆ ಇಳಿಸಿರುವುದು ಅಭಿವೃದ್ಧಿಯ ದೃಷ್ಟಿಯಿಂದ ಮತ್ತು ಹಣದುಬ್ಬರದ ಕಡಿತಕ್ಕೆ ನೆರವಾಗಲಿದೆ ಎಂದು ಮಾಯಕೊಂಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಸಹ ಪ್ರಾಧ್ಯಾಪಕ ಡಾ. ಜಿ.ಎಂ. ದಿನೇಶ್ ಹೇಳಿದ್ದಾರೆ. ಗ್ರಾಮೀಣ ಗೃಹ ನಿರ್ಮಾಣ, ಮೂಲಭೂತ ಸೌಕರ್ಯಕ್ಕೆ ಒತ್ತು, ಸೌರಶಕ್ತಿ ಬಳಕೆಗೆ ಪ್ರಾತಿನಿಧ್ಯತೆ, ನಾರಿ ಶಕ್ತಿಗೆ ಒಲವು, ಲಕ್ಷಾಧಿಪತಿ ದೀದಿ ಯೋಜನೆ ಜಾರಿ, ಪ್ರವಾಸೋದ್ಯಮಕ್ಕೆ ಆದ್ಯತೆ ನೀಡುವ ಮೂಲಕ ಹೊಸ ಜನಪರ ಯೋಜನೆಗಳಿಲ್ಲದ ಅಭಿವೃದ್ಧಿ ಪರ ಬಜೆಟ್ ಇದಾಗಿದೆ. ತೆರಿಗೆ ಪಾವತಿದಾರರಿಗೆ ಮತ್ತೊಮ್ಮೆ ನಿರಾಸೆ ಮೂಡಿದೆ, ಒಟ್ಟಾರೆ ಅತಿ ಆತ್ಮವಿಶ್ವಾಸದ ಮುಂಗಡ ಪತ್ರ ಇದಾಗಿದೆ ಎಂದವರು ಹೇಳಿದ್ದಾರೆ.

# ಬಜೆಟ್ ಮೋದಿ ಸರ್ಕಾರದ ಬೂಸ್ಟರ್ ಡೋಸ್: ಪ್ರಸನ್ನ



ವಿಕಸಿತ ಭಾರತಕ್ಕೆ ಪ್ರಸಕ್ತ ಬಜೆಟ್ ಮೋದಿ ಸರ್ಕಾರದ ಬೂಸ್ಟರ್ ಡೋಸ್ ಆಗಿದೆ ಎಂದು ಮಹಾನಗರ ಪಾಲಿಕೆ ಸದಸ್ಯ ಕೆ. ಪ್ರಸನ್ನ ಕುಮಾರ್ ಹೇಳಿದ್ದಾರೆ.

ಇದು ಸ್ವಾವಲಂಭಿ ಭಾರತಕ್ಕೆ ಭದ್ರ ಬುನಾದಿಯಾಗುವ, ದೇಶದಲ್ಲಿ 80 ಲಕ್ಷ ಮಹಿಳಾ ಸ್ವಸಹಾಯ ಸಂಘದ 1 ಕೋಟಿ ಮಹಿಳೆಯರು ಸ್ವಯಂ ಉದ್ಯೋಗದಡಿ ಲಕ್ಷಾದಿಪತಿಗಳಾಗಿದ್ದು, ಇದನ್ನು 9 ಕೋಟಿ ಮಹಿಳೆಯರ ಆರ್ಥಿ ಸಬಲೀಕರಣಕ್ಕಾಗಿ ವಿಸ್ತರಿಸುವ ಲಖ್ ಪತಿ ದೀದಿ ಯೋಜನೆ ಮಹಿಳೆಯರನ್ನು ಸ್ವಾಲಂಬಿಗಳಾಗಿಸುವುದರ ಜೊತೆಗೆ, ಕುಟುಂಬದ ಆದಾಯ ಹೆಚ್ಚಿಸಲಿದೆ. ಸಣ್ಣ ಸಣ್ಣ ಆಹಾರ ತಯಾರಿಕೆ ಘಟಕಗಳಿಗೆ, ಹಣಕಾಸಿನ ನೆರವು ನೀಡುವ ಯೋಜನೆ (ಮೈಕ್ರೊ ಫುಡ್ ಪ್ರೋಸೆಸಿಂಗ್ ಯೋಜನೆ), 1 ಕೋಟಿ ಮನೆಯ ಮೇಲೆ ಸೋಲಾರ್ ವಿದ್ಯುತ್ ಅಳವಡಿಕೆ, ಸರ್ವ ಜನಾಂಗದ, ಸರ್ವಸ್ಪರ್ಶಿ ಮತ್ತು ಸಾಮಾಜಿಕ ನ್ಯಾಯ ಒದಗಿಸುವ, ಅಭಿವೃದ್ಧಿ, ತಂತ್ರಜ್ಞಾನ ಮತ್ತು ವೈಜ್ಞಾನಿಕ ಭಾರತದ ಏಳಿಗೆಯ ಬಜೆಟ್ ಆಗಿದೆ ಎಂದವರು ಹೇಳಿದ್ದಾರೆ.

# ಹೊಸ ಭರವಸೆ, ಅವಕಾಶಗಳನ್ನು ಸೃಷ್ಟಿಸುವ ವಾಸ್ತವಿಕ ಬಜೆಟ್



ಚುನಾವಣಾ ಪೂರ್ವ ಜನಪ್ರಿಯ ಘೋಷಣೆಗಳ ಬಜೆಟ್ ಮಂಡಿಸದೆ, ಈ ಮಧ್ಯಂತರ ಬಜೆಟ್ ಮೂಲಕ ನಮ್ಮ ಯುವಜನತೆ, ರೈತರು, ಮಹಿಳೆಯರು ಹಾಗೂ ವಿಶೇಷವಾಗಿ ಹಿಂದುಳಿದ ಮತ್ತು ದುರ್ಬಲ ವರ್ಗದ ಜನರ ಜೀವನ ಮಟ್ಟ ಸುಧಾರಿಸುವ, ಹೊಸ ಭರವಸೆ, ಅವಕಾಶಗಳನ್ನು ಸೃಷ್ಟಿಸುವ ವಾಸ್ತವಿಕ ಬಜೆಟ್ ಅನ್ನು ಕೇಂದ್ರ ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಮಂಡಿಸಿದ್ದಾರೆ ಎಂದು ಶಿವನಗೌಡ ಪಾಟೀಲ್ ತಿಳಿಸಿದ್ದಾರೆ.


# ಸ್ವರೂಪ್ ವಿ. ಅಂಗಡಿ ಇವರಿಂದ ನಾಮಪತ್ರ ಸಲ್ಲಿಕೆ



**ಶ್ರೀ ಸ್ವರೂಪ್ ವಿ. ಅಂಗಡಿ** ಇವರು ದಿನಾಂಕ 11.02.2024ರ ಭಾನುವಾರ ನಡೆಯಲಿರುವ **ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,** ಇದರ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಲು ಚುನಾವಣಾಧಿಕಾರಿಗಳಿಗೆ ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸಿದ್ದಾರೆ. **ಈ ಸಂದರ್ಭದಲ್ಲಿ** ನಾಗಪ್ಪ ಬಸಪ್ಪ ಅಂಗಡಿ, ಸದಾನಂದ ಅಂಗಡಿ, ವಿಶ್ವನಾಥ ಅಂಗಡಿ, ಬೆಳ್ಳುಳ್ಳಿ ಗುರುಸ್ವಾಮಿ, ಬಾದಾಮಿ ಕರಿಬಸಪ್ಪ, ಕಶೆಟ್ಟರ್ ಕಾರ್ತಿಕ, ತ್ಯಾವಣಗಿ ಸಿದ್ದರಾಜು, ಹಳ್ಳೂರು ಶಿವಾನಂದ್, ಡಿ.ಸಿ. ರುದ್ರಸ್ವಾಮಿ, ಡಿ.ಸಿ. ವಿಶ್ವನಾಥ್, ದಿದ್ದಿಗೆ ಮಠದ ನಾಗರಾಜ್, ಆರಾಧ್ಯ ಮಠ್ ಎಸ್.ಪಿ., ಚಿಗಟೇರಿ ವಿಜಯಕುಮಾರ್, ಜಿ.ಕೆ. ನಿಜಲಿಂಗಪ್ಪ, ಜಾಲಿಮರದ ವಿಜಯಕುಮಾರ್, ಜಿ.ಪ್ರಭು, ಅಂಗಡಿ ರಾಜು, ಎಲೆ ಶಿವಣ್ಣ, ನಂದಿಗಾವಿ ಗೌಡ್ರು ಸಂದೀಪ್, ಟಿ.ರವಿಕುಮಾರ್, ಮುದ್ದಾಪುರ್ ಅಶೋಕ, ಬೇತೂರು ಬಸವರಾಜ್, ಬೋರಣ್ಣನವರ ಪ್ರವೀಣಕುಮಾರ್, ಕನ್ನಪ್ಪರ್ ಬಾತಿ ಶರತ್, ಪೆರಂಪಳ್ಳಿ ಸುಪ್ರೀತರಾವ್, ತೋಳಹುಣಸೆ ಲಿಂಗರಾಜ್, ಶ್ರೀಕಾಂತ್ ಬಗರೆ, ದರ್ಶನ್, ದಯಾನಂದ್, ನವೀನ್, ಭರತ್, ಸಚಿನ್ RKO, ವಿನಿತ್, ಟಿ.ಎಂ. ಅಕ್ಷಯ್, ವಿಕಾಸಗೌಡ ಹಾಗೂ ಇನ್ನೂ ಮುಂತಾದ ನೂರಾರು ಗಣ್ಯ ವರ್ತಕರು, ಸ್ನೇಹಿತರು, ಹಿತೈಷಿಗಳು, ಬಂಧುಗಳು ಉಪಸ್ಥಿತರಿದ್ದರು.

**ಬ್ಯಾಂಕಿನ ಗೌರವಾನ್ವಿತ ಷೇರುದಾರರು, ಪ್ರೋತ್ಸಾಹಿಸಿ, ಬೆಂಬಲಿಸಿ, ಆಶೀರ್ವದಿಸಿ.**



## ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್, ದಾವಣಗೆರೆ

## ಆಡಳಿತ ಮಂಡಳಿ ಚುನಾವಣೆ 2024

ಅಖಿಲೇಶ್ VOTE FOR YOUTH ಕೋಗುಂಡಿ



ಕೋಗುಂಡಿ ಹಾಲಪ್ಪಮೇಷ್ಟು

ಆತ್ಮೀಯ ಮತ ಬಾಂಧವರೇ,

**ದಿನಾಂಕ: 11-02-2024** ರಂದು ಮೇಲ್ಕಂಡ ಬ್ಯಾಂಕಿನ ಚುನಾವಣೆ ನಡೆಯಲಿದ್ದು **"ನಾನು ನಿಮ್ಮ ಕೋಗುಂಡಿ ಹಾಲಪ್ಪಮೇಷ್ಟು ಅವರ ಮೊಮ್ಮಗನಾದ ಅಖಿಲೇಶ್ ಪಿ. ಕೋಗುಂಡಿ"** ಈ ಚುನಾವಣೆಯಲ್ಲಿ ಗುರುಹಿರಿಯರ ಹಾಗೂ ತಮ್ಮೆಲ್ಲರ ಆಶೀರ್ವಾದದೊಂದಿಗೆ ನಿರ್ದೇಶಕರ ಸ್ಥಾನಕ್ಕೆ ಇಚ್ಛಿಸಿದ್ದು, ಬ್ಯಾಂಕಿನ ಮತ್ತು ಬ್ಯಾಂಕಿನ ಸದಸ್ಯರ ಸರ್ವತೋಮುಖ ಏಳ್ಗೆಗಾಗಿ ಶ್ರಮಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲು ಉತ್ಸುಕನಾಗಿದ್ದೇನೆ, ನಾನು ಪ್ರಪ್ರಥಮ ಬಾರಿಗೆ ಹೊಸ ಹೊಸ ಆಲೋಚನೆಗಳೊಂದಿಗೆ **[ಬ್ಯಾಂಕಿಂಗ್ ಕ್ಷೇತ್ರದ ಕಾರ್ಯ ನಿರ್ವಹಣೆ ಇನ್ನಷ್ಟು ಚುರುಕುಗೊಂಡು ಗ್ರಾಹಕರು ಮತ್ತು ಷೇರುದಾರರುಗಳಿಗೆ ಅನುಕೂಲವಾಗುವಂತೆ ಹೆಚ್ಚಿನ ಸೇವೆಯನ್ನು ನೀಡುವ ಸದುದ್ದೇಶದಿಂದ]** ಈ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೇನೆ, ಆದುದರಿಂದ **ತಾವುಗಳು ಮತದಾನ ಮಾಡುವಾಗ ನಿಮ್ಮ ಮತ ನನಗೂ ಒಂದು ನೀಡಿ ನನ್ನನ್ನು ಜಯಶೀಲನನ್ನಾಗಿ** ಮಾಡಿ ನಿಮ್ಮೆಲ್ಲರ ಸೇವೆಯನ್ನು ಮಾಡಲು ಸದಾವಕಾಶ ಮಾಡಿಕೊಡಬೇಕಾಗಿ ಕೃತಜ್ಞತಾಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ ,

ಮತದಾನ ದಿನಾಂಕ: 11-02-2024 ರ ರವಿವಾರ
ಮತದಾನ ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ



ತಮ್ಮ ಸೇವಾಕಾಂಕ್ಷಿ

ಇಂತಿ ನಿಮ್ಮ ಮನೆಯ ಮಗ

**ಅಖಿಲೇಶ್ ಪಿ. ಕೋಗುಂಡಿ**

98457 36222



ಅಖಿಲೇಶ್ VOICE OF CUSTOMER ಕೋಗುಂಡಿ

## ನನ್ನ ನಡೆ ಗ್ರಾಹಕರ ಕಡೆ !

## ಎಲ್ಲರಿಗಾಗಿ ನಾನು ನನಗಾಗಿ ಎಲ್ಲರೂ !!

– ಇದು ಸಹಕಾರತತ್ವದ ಮುಖ್ಯ ಸಂದೇಶ

**ಇಂತಹ ಶ್ರೇಷ್ಠ ತತ್ವದ ಬುನಾದಿಯ ಮೇಲೆ ಕಟ್ಟಿರುವದು ಈ ಸಹಕಾರ ಬ್ಯಾಂಕ್**

1) ಪಾರದರ್ಶಕ ವ್ಯವಹಾರ.
2) ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಸಾಲ ನೀಡುವ ಮತ್ತು ಅಂಗೈಯಲ್ಲಿ ಹಣಕಾಸಿನ ವ್ಯವಹಾರ ಚಟುವಟಿಕೆಯನ್ನು ಕೈಗೊಳ್ಳಲು ಮತ್ತಷ್ಟು ಮಗದಷ್ಟು ವೇಗವನ್ನು ತರುವುದು.
3) ಸಾಲದ ಜೊತೆ ವಿಮಾ ಭದ್ರತೆಯೊಂದಿಗೆ ಸಾಲ–ಸೌಲಭ್ಯ ನೀಡಿ ಗ್ರಾಹಕರಿಗೆ ಹೊರೆಯಾಗದಂತೆ ಗ್ರಾಹಕರ ಸ್ನೇಹಿಯಾಗಿ ಕೆಲಸ ನಿರ್ವಹಿಸುವುದು.
4) ಸಾಲ ಪಡೆದ ಗ್ರಾಹಕರ ಆಕಸ್ಮಿಕ ಮರಣಕ್ಕೆ ತುತ್ತಾದಾಗ ವಿಮೆ ಯೋಜನೆಯಡಿ ಸಾಲ ಮರುಪಾವತಿ ಕಾಣುವಂತಾಗಬೇಕು.
5) ಈಗಿನ ವೇಗದ ಯುಗದಲ್ಲಿ ದ್ವಿಚಕ್ರವಾಹನಗಳಿಗೆ ತ್ವರಿತಗತಿಯಲ್ಲಿ ಸಾಲ–ಸೌಲಭ್ಯವನ್ನು ಪಡೆಯುಂತಾಗಬೇಕು.
6) ಪ್ರಸ್ತುತ ಮಾನ್ಯ ಪ್ರಧಾನಿಗಳ ಅಭಿಲಾಷೆಯಂತೆ ಭಾರತ ದೇಶವನ್ನು ಡಿಜಿಟಲೀಕರಣದಿಂದ ಅಂಗೈಯಲ್ಲಿ ವ್ಯವಹರಿಸೋಣ ಪ್ರಸ್ತುತ ಆಧುನಿಕ ತಂತ್ರಜ್ಞಾನದಲ್ಲಿ ಸಹಕಾರ ಕ್ಷೇತ್ರದಲ್ಲಿಯೂ ಕೂಡ ಗ್ರಾಹಕನಿಗೆ ಆನ್ಲೈನ್ ಬ್ಯಾಂಕಿಂಗ್ (Loan Tracking Process, FASTag Recharge, Online Account Opening, UPI Payments) ವ್ಯವಹಾರವನ್ನು ತರುವ ಬಗ್ಗೆ.
7) ದೈನಂದಿನ ಚಟುವಟಿಕೆ ನಡೆಸುವ ಸಣ್ಣ ಸಣ್ಣ ವ್ಯಾಪಾರ ಮಾಡುವ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸುವಂತೆ ಮತ್ತು ಹೊಸದಾಗಿ ವ್ಯವಹಾರವನ್ನು ಪ್ರಾರಂಭ ಮಾಡುವವರಿಗೆ ತ್ವರಿತಗತಿಯಲ್ಲಿ ಸಾಲ ಸೌಲಭ್ಯವನ್ನು ಒದಗಿಸುವ ಬಗ್ಗೆ.
8) ಶಾಲಾ ಮಕ್ಕಳಿಗೆ ಮೈನರ ಅಕೌಂಟ್‌ನ್ನು (ಉಳಿತಾಯ ಖಾತೆ) ತೆರೆಯುವ ಬಗ್ಗೆ.

ಈ ನಿಟ್ಟಿನಲ್ಲಿ ಇವುಗಳ ಈಡೇರಿಕೆಗೆ ನಿಮ್ಮಗಳ ಸಹಕಾರ ಅತ್ಯಗತ್ಯ.

– ಇಂತಿ ನಿಮ್ಮ ಮನೆಯ ಮಗ

**ಅಖಿಲೇಶ ಪಿ. ಕೋಗುಂಡಿ**

# ಕರ್ನಾಟಕ ಸರ್ಕಾರ. ಗ್ಯಾರಂಟಿ ಸರ್ಕಾರ

# ಗೃಹ ಜ್ಯೋತಿ

## ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ನೋಂದಣಿಯಾದ ಒಟ್ಟು ಸಂಖ್ಯೆ **1.65 ಕೋಟಿ**

ಫಲಾನುಭವಿಗಳ ಒಟ್ಟು ಸಂಖ್ಯೆ **1.59 ಕೋಟಿ**

ಒಟ್ಟು ಸಬ್ಸಿಡಿ ಮೊತ್ತ **ರೂ.4,400/- ಕೋಟಿ**

**96%** ಫಲಾನುಭವಿಗಳು - ಕರ್ನಾಟಕದಾದ್ಯಂತ

ನೋಂದಣಿಗೆ ಯಾವುದೇ ಅಂತಿಮ ದಿನಾಂಕ ಇರುವುದಿಲ್ಲ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ವಿದ್ಯುತ್ ಬಿಲ್/ ELECTRICITY BILL
GSTN No.: 29AACCB1412G1Z5

O/o. AEE(Ele.) N7 - KURUBARAHALLI

ಗ್ರಾಹಕರ ಆರ್‌ಆರ್ ಸಂಖ್ಯೆ

**Account Details**

| | |
|---|---|
| ಆರ್.ಆರ್. ಸಂಖ್ಯೆ/ RR Nos | N3EH4536 |
| ಖಾತೆ ಸಂಖ್ಯೆ/Acc.ID | 5107756000 |
| ಮಾ.ಓ. ಸಂಕೇತ/MR Code | 14002768 |

**ವೈಯಕ್ತಿಕ ವಿವರಗಳು/Personal Details**
ಹೆಸರು ಮತ್ತು ವಿಳಾಸ/Name and Address

ಗೃಹ ಜ್ಯೋತಿಗೆ ಅರ್ಹತೆಯ ವಿವರಗಳು

**ಸಂಪರ್ಕದ ವಿವರಗಳು/Connection Details**

| | |
|---|---|
| ಜಕಾತಿ/Tariff | 1LT2A |
| ಮಂ. ಪ್ರಮಾಣ/Sanc Load | 3KW + OHP |
| ಗೃಹ ಜ್ಯೋತಿ/GJS Reg Date | 27-06-2023 |
| ಸರಾಸರಿ/Average [FY22-23] | 57.17 |
| ಅರ್ಹ/Entitlement Units | 63.0 |

ಉಚಿತ ಮತ್ತು ಬಿಲ್ ಮಾಡಬಹುದಾದ ಯೂನಿಟ್ ವಿವರಗಳು

**ಬಿಲ್ ವಿವರ/Billing Details**

| | |
|---|---|
| ಬಿಲ್ಲಿಂಗ್ ಅವಧಿ/Billing Period | 10/10/2023 to 10/11/2023 |
| ರೀಡಿಂಗ್ ದಿನಾಂಕ/Rdng Date | 10-11-2023 |
| ಬಿಲ್ ಸಂಖ್ಯೆ/Bill No. | 43133023B100092 |

**ಬಳಕೆಯ ವಿವರ/Consumption Detail**

| | |
|---|---|
| ಇಂದಿನ ಮಾಪನ/Pres Rdg. | 6312 |
| ಹಿಂದಿನ ಮಾಪನ/Prev Rdg. | 6252 |
| ಮಾಪನ ಸ್ಥಿರಾಂಕ/Constant | 1 |
| ಬಳಕೆ/Consumption Units | 60 |
| ಸರಾಸರಿ/Average | 1.7KW |
| ದಾಖಲಿತ ಬೇಡಿಕೆ/Recorded MD | 1.0 |
| ಪವರ್ ಫ್ಯಾಕ್ಟರ್/Power Factor | 0.0KW |
| ಸಂ. ಪ್ರಮಾಣ/Connected Load | |

ಅರ್ಹವಾದ ಯೂನಿಟ್ ವಿವರಗಳು

| | |
|---|---|
| ಅರ್ಹ ಯೂನಿಟ್/Eligible for subsidy | 60 |
| ಪಾವತಿ ಯೂನಿಟ್/Units chargeable | 0 |

**ಬಳಸಿದ ಯೂನಿಟ್ ಬಿಲ್ ಮೊತ್ತ/Bill for Consumed Unit**

| | | |
|---|---|---|
| ನಿಗದಿತ ಶುಲ್ಕ/Fixed Charges (Unit, Rate, Amount) | | |
| 3.0KW | 110 | 330.00 |
| ವಿದ್ಯುತ್ ಶುಲ್ಕ/Energy Charges (Unit, Rate, Amount) | | |
| 60 | 4.75 | 285.00 |
| ಇಂಧನ ಹೊಂದಾಣಿಕೆ ಶುಲ್ಕ/FPPCA (Unit, Rate, Amt) | | |
| 60 | 0.35 | 21.00 |
| ತೆರಿಗೆ/Tax @ 9% | | 25.65 |
| ಉಪ ಮೊತ್ತ-1/Sub-Total-1 | | 661.65 |

ವಿದ್ಯುತ್‌ನ ಒಟ್ಟು ಬಿಲ್ ಮೊತ್ತ

**ಗೃಹ ಜ್ಯೋತಿ ಅನುದಾನ/Gruha Jyothi Subsidy by GoK**

| | | |
|---|---|---|
| ನಿಗದಿತ ಶುಲ್ಕ/Fixed Charges (Unit, Rate, Amount) | | |
| 3.0KW | 110 | 330.00 |
| ವಿದ್ಯುತ್ ಶುಲ್ಕ/Energy Charges (Unit, Rate, Amount) | | |
| 60 | 4.75 | 285.00 |
| ಇಂಧನ ಹೊಂದಾಣಿಕೆ ಶುಲ್ಕ/FPPCA (Unit, Rate, Amt) | | |
| 60 | 0.35 | 21.00 |
| ತೆರಿಗೆ/Tax @ 9% | | 25.65 |
| ಉಪ ಮೊತ್ತ-2/Sub-Total-2 | | 661.65 |

ಗೃಹ ಜ್ಯೋತಿ ಸಬ್ಸಿಡಿ ಮೊತ್ತ

| | |
|---|---|
| ಬಿಲ್ ಮೊತ್ತ/Bill Amount (1-2) | ₹ 0.0 |
| **Additional Charges** | |
| ಪಿ.ಎಫ್. ದಂಡ/PF Penalty | 0.00 |
| ಹೆ.ಲೋ. ದಂಡ/MD Penalty | 0.00 |
| ಬಡ್ಡಿ/Interest | 0.00 |
| ಇತರೇ/Others | 0.00 |
| ಡೆಬಿಟ್ or ಕ್ರೆಡಿಟ್/Debit or Credit | 0.00 |
| ಪ್ರಸ್ತುತ ಬೇಡಿಕೆ/Cur. Demand Payable | ₹0.00 |
| ಬಾಕಿ/Arrears | 0.00 |
| **ಪಾವತಿಯ ಮೊತ್ತ/Net Payable** | ₹ 0.00 |
| ಪಾವತಿಗೆ ಕಡೇಯ ದಿನಾಂಕ/Due Date | 24/11/2023 |

5107756000#0 10/11/2023 10:45
For any billing related clarification call 1912 / Call Subdivision

ಪಾವತಿ ಮಾಡಬೇಕಾದ ಬಿಲ್ ಮೊತ್ತ ರೂ. 0.00



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

**ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ** ಪ್ರಗತಿಪರ ಮತ್ತು ಸುಸ್ಥಿರ ನಾಯಕತ್ವದಡಿಯಲ್ಲಿ ಜನತೆಗೆ ಸುಭದ್ರ ಬದುಕು ಕಟ್ಟಿಕೊಟ್ಟ 'ಕರ್ನಾಟಕ ಮಾದರಿ ಸರ್ಕಾರ'

ಶಕ್ತಿ – ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ: ಪ್ರತಿನಿತ್ಯ 62 ಲಕ್ಷ ಮಹಿಳಾ ಪ್ರಯಾಣಿಕರು. ಇದುವರೆಗೆ 136 ಕೋಟಿ ಟ್ರಿಪ್

ಗೃಹಲಕ್ಷ್ಮಿ – ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000: 1.09 ಕೋಟಿ ಖಾತೆಗಳಿಗೆ ನಗದು ವರ್ಗಾವಣೆ




ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಮತ್ತು ಮಾನ್ಯ ಉಪ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ರವರು ಗೃಹ ಜ್ಯೋತಿ ಗ್ಯಾರಂಟಿ ಯೋಜನೆಗೆ ಚಾಲನೆ ನೀಡುತ್ತಿರುವುದು.

ಅನ್ನಭಾಗ್ಯ – ಬಡವರಿಗೆ ಪ್ರತಿ ತಿಂಗಳು 10 kg: 3.99 ಕೋಟಿ ಫಲಾನುಭವಿಗಳಿಗೆ 3751 ಕೋಟಿ ರೂ. ವರ್ಗಾವಣೆ

ಯುವನಿಧಿ – ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500: 4.5 ಲಕ್ಷ ಯುವ ಜನರಿಗೆ ನೆರವಾಗುವ ನಿರೀಕ್ಷೆ

## ನುಡಿದಂತೆ ನಡೆದಿದ್ದೇವೆ...

ಕರ್ನಾಟಕದಲ್ಲಿ **96% ಗೂ ಹೆಚ್ಚಿನ ಜನರು** ಒಂದು ಅಥವಾ ಹೆಚ್ಚು ಗ್ಯಾರಂಟಿ ಯೋಜನೆಗಳ ಅನುಕೂಲವನ್ನು ಪಡೆಯುತ್ತಿರುವರು.

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಬ್ರಾಹ್ಮಣ ಸಮುದಾಯ ಮಾಲೀಕತ್ವದ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ಸದ್ವಿಚಾರದಿಂದ ಆತ್ಮಶಕ್ತಿ, ಮನಸ್ಸಿಗೆ ಶಾಂತಿ : ಶಿವಾನಿ ದೀದಿ



**(1ನೇ ಪುಟದಿಂದ)** ಅಸೂಯೆ, ನಿರೀಕ್ಷೆ ಮೋಹ, ಚಿಂತೆ ಇತ್ಯಾದಿಗಳು ಆತ್ಮದ ಶಕ್ತಿಯನ್ನು ಕುಂದಿಸುತ್ತವೆ. ಮತ್ತೊಂದೆಡೆ ಸಂತೋಷ, ಶಾಂತಿ, ವಿಶ್ವಾಸ, ಸಹಕಾರ, ಪ್ರೀತಿ, ಧ್ಯಾನ, ಕಾಳಜಿಗಳು ಆತ್ಮದ ಶಕ್ತಿ ಹೆಚ್ಚಿಸುತ್ತವೆ ಎಂದವರು ಹೇಳಿದರು.

ನಮ್ಮ ಯಾವ ವಿಚಾರ ಹಾಗೂ ಕರ್ಮಗಳು ಆತ್ಮಶಕ್ತಿಯನ್ನು ಕುಂದಿಸುತ್ತವೆಯೋ ಅಂಥವುಗಳಿಂದ ದೂರ ಇರಬೇಕು. ನಮ್ಮ ಬಗ್ಗೆ ಹಾಗೂ ಬೇರೆಯವರ ಬಗ್ಗೆ ಸದಾ ಒಳ್ಳೆಯ ವಿಚಾರಗಳನ್ನು ಮಾಡಿದಾಗ ಆತ್ಮಶಕ್ತಿ ಹೆಚ್ಚಾಗುತ್ತದೆ ಎಂದವರು ಹೇಳಿದರು.

ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಶಾಮನೂರು ಶಿವಶಂಕರಪ್ಪ, ಬ್ರಹ್ಮಾಕುಮಾರಿ ಸಮಾಜವು ಅಂತರರಾಷ್ಟ್ರೀಯ ಅಧ್ಯಾತ್ಮಿಕ ಸಂಸ್ಥೆಯಾಗಿದೆ. ಧರ್ಮ – ಜಾತಿ ಭೇದವಿಲ್ಲದೇ ಅಧ್ಯಾತ್ಮಿಕ ಶಿಕ್ಷಣ ನೀಡುತ್ತಿದೆ ಎಂದು ಹೇಳಿದರು.

ನಕಾರಾತ್ಮಕ ಭಾವನೆಗಳಿಂದ ಇಂದು ವಿರೋಧಾತ್ಮಕ ಪ್ರವೃತ್ತಿ ಬೆಳೆಯುತ್ತಿದೆ, ಸಾಮಾಜಿಕ ವಾತಾವರಣ ಹಾಳಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಕಾರಾತ್ಮಕ ಚಿಂತನೆಯ ಅಗತ್ಯವಿದೆ ಎಂದರು.

ವೇದಿಕೆಯ ಮೇಲೆ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯದ ನಿರ್ದೇಶಕರಾದ ಬ್ರಹ್ಮಾಕುಮಾರ ಬಸವರಾಜ ರಾಜಋಷಿ, ಶಾಸಕ ಬಿ.ಪಿ. ಹರೀಶ್, ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ತಹಶೀಲ್ದಾರ್ ಅಶ್ವತ್ಥ್, ಬಾಪೂಜಿ ವಿದ್ಯಾಸಂಸ್ಥೆ ಸದಸ್ಯ ಅಥಣಿ ಎಸ್. ವೀರಣ್ಣ, ದಾವಣಗೆರೆ ವಿ.ವಿ. ಉಪ ಕುಲಪತಿ ಪ್ರೊ. ಬಿ.ಡಿ. ಕುಂಬಾರ್, ಬಾಪೂಜಿ ವಿದ್ಯಾಸಂಸ್ಥೆ ಸದಸ್ಯೆ ಪ್ರಭಾ ಮಲ್ಲಿಕಾರ್ಜುನ್, ಗ್ರಾಸಿಂ ಇಂಡಸ್ಟ್ರೀಸ್ ಸೀನಿಯರ್ ಪ್ರೆಸಿಡೆಂಟ್ ಅಜಯ್ ಗುಪ್ತ ಮತ್ತಿತರರು ಉಪಸ್ಥಿತರಿದ್ದರು.

ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯದ ಸಂಚಾಲಕರಾದ ಬ್ರಹ್ಮಾಕುಮಾರಿ ನಿರ್ಮಲಾಜೀ ಅಧ್ಯಕ್ಷತೆ ವಹಿಸಿದ್ದರು. ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಸಂಚಾಲಕರಾದ ಬ್ರಹ್ಮಾಕುಮಾರಿ ಲೀಲಾಜಿ ಸ್ವಾಗತಿಸಿದರು.

## ದಿನದ ಕರ್ಮಕ್ಕೆ ಅಂಕಗಳಿಂದ ಅಂಕೆ

ನಾವು ಪ್ರತಿನಿತ್ಯ ಮಾಡುವ ಕರ್ಮಗಳಿಂದ ಆತ್ಮಕ್ಕೆ ಶಕ್ತಿ ಹೆಚ್ಚಾಗಬೇಕು, ಸೌಖ್ಯದ ಅನುಭವ ಆಗಬೇಕು, ಶರೀರದ ಚೈತನ್ಯ ಹೆಚ್ಚಾಗಿ ಶಾಂತಿ ದೊರೆಯಬೇಕು. ಇಂತಹ ಕರ್ಮ ಎಷ್ಟರ ಮಟ್ಟಿಗೆ ಮಾಡಿದ್ದೇವೆ? ನಾವು ದಿನವೊಂದರಲ್ಲಿ ಮಾಡಿದ ಕರ್ಮಗಳಿಗೆ ಹತ್ತಕ್ಕೆ ಎಷ್ಟು ಅಂಕ ಕೊಡಬಹುದು? ಎಂಬ ಪ್ರಶ್ನೆ ಹಾಕಿಕೊಳ್ಳಿ. ನಮ್ಮ ಚಿಂತನೆ, ಮಾತುಗಳು ಹಾಗೂ ವ್ಯವಹಾರ ಹೇಗಿತ್ತು ಎಂಬುದರ ಬಗ್ಗೆ ಗಮನ ಹರಿಸಿ. ಪ್ರತಿದಿನ ಹತ್ತಕ್ಕೆ ಹತ್ತು ಅಂಕ ಗಳಿಸುವ ಸಾಮರ್ಥ್ಯ ನಿಮ್ಮಲ್ಲಿದೆ. ಅಂತಹ ಸಾಮರ್ಥ್ಯ ಕಂಡುಕೊಳ್ಳುವುದರಿಂದ ಆತ್ಮಬಲವಾಗುತ್ತದೆ ಎಂದು ಬ್ರಹ್ಮಾಕುಮಾರಿ ಶಿವಾನಿ ದೀದಿ ಹೇಳಿದರು.

## ಪರ ನಿಂದನೆ ನಿಲ್ಲಿಸುವ ವ್ರತ

ಗಾಸಿಪ್ ಹೆಸರಿನಲ್ಲಿ ಬೇರೆಯವರ ಬಗ್ಗೆ ಕೀಳಾಗಿ ಮಾತನಾಡುವುದರಿಂದ ನಮ್ಮ ಚೈತನ್ಯ ಕುಂದುತ್ತದೆ. ಬೇರೆಯರ ಬಗ್ಗೆ ಕೆಟ್ಟ ಮಾತನಾಡುವುದು ಎಂದರೆ, ಪರರ ಮನೆಯ ಕಸವನ್ನು ತಂದು ನಮ್ಮ ಮನೆ ಹಾಗೂ ಮನಸ್ಸಿನಲ್ಲಿ ಸುರಿದುಕೊಂಡಂತೆ.

ನಾವು ಬೇರೆಯವರ ಬಗ್ಗೆ ಕೆಟ್ಟ ಮಾತುಗಳನ್ನು ಆಡಬಾರದು. ಹಾಗೆಯೇ ಬೇರೆಯವರೂ ನಮ್ಮ ಬಳಿ ಕೆಟ್ಟ ಮಾತುಗಳನ್ನು ಆಡಲು ಅವಕಾಶ ನೀಡಬಾರದು. ಇಂತಹ ಪರ ನಿಂದನೆ ನಿಲ್ಲಿಸುವ 'ವ್ರತ'ವನ್ನು ಒಂದು ತಿಂಗಳು ಕೈಗೊಂಡರೆ ಶಾಂತಿ - ನೆಮ್ಮದಿ ನಿರೀಕ್ಷೆಗೂ ಹೆಚ್ಚಾಗಿ ಸಿಗುತ್ತದೆ ಎಂದು ಬ್ರಹ್ಮಾಕುಮಾರಿ ಶಿವಾನಿ ದೀದಿ ಹೇಳಿದರು.

## ಸಂಕಲ್ಪ ಧಾರಣೆಯಿಂದ ಸಿದ್ಧಿ ಸಾಧ್ಯ

ಭಾರತದಲ್ಲಿ ಋಷಿ, ಮುನಿ, ಸನ್ಯಾಸಿ ಹಾಗೂ ಧರ್ಮಾತ್ಮರು ಸಂಕಲ್ಪ ಮಾಡಿದ್ದೆಲ್ಲಾ ಸಾಧ್ಯವಾಗುತ್ತಿತ್ತು. ಇದಕ್ಕೆ ಅವರ ಮನಸ್ಸಿನಲ್ಲಿದ್ದ ಶಕ್ತಿಯೇ ಕಾರಣ. ಇಂತಹ ಸಂಕಲ್ಪ ಶಕ್ತಿಯನ್ನೂ ನಾವೂ ಹೊಂದಬಹುದು. ಪ್ರತಿದಿನ ಮಲಗುವ ಮುಂಚಿನ ಸಮಯ ಹಾಗೂ ಬೆಳಿಗ್ಗೆ ಎದ್ದ ತಕ್ಷಣ ನಮ್ಮ ಸುಪ್ತ ಮನಸ್ಸು ಹೆಚ್ಚು ಶಕ್ತಿಯುತವಾಗಿರುತ್ತದೆ. ಈ ಸಮಯವು ಸಂಕಲ್ಪ ತೊಡಲು ಅತ್ಯಂತ ಸೂಕ್ತ. ಕುಟುಂಬದಲ್ಲಿ ಶಾಂತಿ ನೆಲೆಸುವುದೇ ಆಗಲೀ, ಆರೋಗ್ಯವೇ ಆಗಲೀ ಯಾವುದೇ ಸಂಕಲ್ಪದ ಬಗ್ಗೆ 10-15 ನಿಮಿಷಗಳ ಕಾಲ ಚಿಂತಿಸಬೇಕು. ಇದನ್ನು ಬರೆದರೆ ಇನ್ನೂ ಉತ್ತಮ. ಇಂತಹ ಸಂಕಲ್ಪ ಧಾರಣೆಯಿಂದ ಅಂದುಕೊಂಡಿದ್ದನ್ನು ಸಾಧಿಸಲು ನೆರವಾಗುತ್ತದೆ ಎಂದು ಬ್ರಹ್ಮಾಕುಮಾರಿ ಶಿವಾನಿ ದೀದಿ ತಿಳಿಸಿದರು.

# ಜ್ಞಾನವಾಪಿ ನೆಲಮಾಳಿಗೆಯಲ್ಲಿ ಪೂಜೆ

## 31 ವರ್ಷಗಳ ನಂತರ ಪೂಜಾ ಪದ್ಧತಿ ಪುನರಾರಂಭ



ವಾರಣಾಸಿ, ಫೆ. 1 – ಜ್ಞಾನವಾಪಿ ಸಂಕೀರ್ಣದ ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಲು ನ್ಯಾಯಾಲಯ ಅನುಮತಿ ನೀಡಿದ ನಂತರ, ಬುಧವಾರ ತಡರಾತ್ರಿ ಪೂಜೆಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಯಿತು.

ಬುಧವಾರದಂದು ವಾರಣಾಸಿ ಜಿಲ್ಲಾ ನ್ಯಾಯಾಲಯ ಪೂಜೆಗೆ ಅನುಮತಿ ನೀಡಿತ್ತು. ಮೂರು ದಶಕಗಳ ನಂತರ ಜ್ಞಾನವಾಪಿ ಸಂಕೀರ್ಣದಲ್ಲಿ ಪೂಜೆಗೆ ಮತ್ತೆ ಅವಕಾಶ ನೀಡಲಾಗಿತ್ತು. ಈ ಸಂಕೀರ್ಣವು ಕಾಶಿ ವಿಶ್ವನಾಥ ದೇವಾಲಯದ ಪಕ್ಕದಲ್ಲಿದೆ.

31 ವರ್ಷಗಳ ನಂತರ ವ್ಯಾಸರ ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಲಾಯಿತು ಎಂದು ಕಾಶಿ ವಿಶ್ವನಾಥ ದೇವಾಲಯ ಟ್ರಸ್ಟ್ ಅಧ್ಯಕ್ಷ ನಾಗೇಂದ್ರ ಪಾಂಡೆ ತಿಳಿಸಿದ್ದಾರೆ.

ದಕ್ಷಿಣದ ನೆಲಮಾಳಿಗೆಯನ್ನು ಬುಧವಾರ ರಾತ್ರಿ 10.30ಕ್ಕೆ ತೆರೆಯಲಾಯಿತು. ಅಲ್ಲಿ ಪೂಜೆ ಸಲ್ಲಿಸಲಾಯಿತು ಎಂದವರು ಹೇಳಿದರು. ನ್ಯಾಯಾಲಯದ ಆದೇಶದ ನಂತರ ಈ ಕ್ರಮ ಅಗತ್ಯವಾಗಿತ್ತು.

ಜಿಲ್ಲಾಡಳಿತ ಅತ್ಯಂತ ಪ್ರಾಮಾಣಿಕತೆಯೊಂದಿಗೆ ಈ ಕೆಲಸ ಮಾಡಿದೆ ಎಂದೂ ಅವರು ಹೇಳಿದ್ದಾರೆ. ನಾವು ನ್ಯಾಯಾಲಯದ ಆದೇಶ ಪಾಲಿಸಿದ್ದೇವೆ ಎಂದು ಜಿಲ್ಲಾಧಿಕಾರಿ ಎಸ್. ರಾಜಲಿಂಗಂ ಹೇಳಿದ್ದಾರೆ. ನೆಲಮಾಳಿಗೆಯನ್ನು ಸ್ವಚ್ಛಗೊಳಿಸಿದ ನಂತರ ಲಕ್ಷ್ಮಿ ದೇವಿ ಹಾಗೂ ಗಣೇಶ ದೇವರಿಗೆ ಪೂಜೆ ಸಲ್ಲಿಸಲಾಯಿತು ಎಂದು ಸ್ಥಳೀಯರು ತಿಳಿಸಿದ್ದಾರೆ.

ಬುಧವಾರ ರಾತ್ರಿ 9.30ಕ್ಕೆ ಕಾಶಿ ವಿಶ್ವನಾಥ ದೇವಾಲಯದ ಟ್ರಸ್ಟ್ ಸದಸ್ಯರನ್ನು ಕರೆಸಲಾಯಿತು. ನಂದಿ ವಿಗ್ರಹದ ಎದುರಿರುವ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದಕ್ಕೂ ಮುಂಚೆ, ಜ್ಞಾನವಾಪಿ ಸಂಕೀರ್ಣದಲ್ಲಿ ಭಾರತೀಯ ಪುರಾತತ್ವ ಇಲಾಖೆ ಸಮೀಕ್ಷೆ ನಡೆಸಿತ್ತು.

ಮೊದಲೇ ಇದ್ದ ದೇವಾಲಯದ ಅವಶೇಷಗಳ ಮೇಲೆ ಮಸೀದಿ ನಿರ್ಮಿಸಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿತ್ತು.

1993ರವರೆಗೂ ಈ ಸಂಕೀರ್ಣದಲ್ಲಿ ಪೂಜೆಗೆ ಅವಕಾಶವಿತ್ತು. ಆದರೆ, ಉತ್ತರ ಪ್ರದೇಶದ ಆಗಿನ ಮುಲಾಯಂ ಸಿಂಗ್ ಯಾದವ್ ಸರ್ಕಾರ ಪೂಜೆಗೆ ತಡೆ ಹಾಕಿತ್ತು. ಈಗ ಮತ್ತೆ ಪೂಜೆಗೆ ಮರು ಚಾಲನೆ ದೊರೆತಿದೆ.


## ಶಿವ ಸಹಕಾರಿ ಬ್ಯಾಂಕ್ ನಿಯಮಿತ

ಆಡಳಿತ ಕಚೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ. 577001, ಫೋ.: 256107

### ಸಾರ್ವಜನಿಕ ಪ್ರಕಟಣೆ

ಪ್ರಧಾನ ವ್ಯವಸ್ಥಾಪಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ ದಾವಣಗೆರೆ ಆದ ನಾನು ಸಾರ್ವಜನಿಕ ಪ್ರಕಟಣೆ ನೀಡುವುದೇನೆಂದರೆ, ಈ ಕೆಳಕಂಡ ಸ್ಥಿರ ಸ್ವತ್ತನ್ನು ಸರೋಪ ಕಾಯ್ದೆ ಅಡಿ ದಿನಾಂಕ 09.10.2022 ರಂದು ಪತ್ರಿಕಾ ಪ್ರಕಟಣೆ ನೀಡಿ ಸದರಿ ಬ್ಯಾಂಕಿನ ಹೆಸರಿಗೆ ಕಬ್ಜ ವಹಿಸಿಕೊಂಡಿರುತ್ತದೆ. ಈ ಬಗ್ಗೆ ದಿನಾಂಕ: 23.12.2022ರಂದು ಮಾನ್ಯ ಜಿಲ್ಲಾಧಿಕಾರಿಗಳ ಆದೇಶವಾಗಿರುತ್ತದೆ.

ಸಾಲಗಾರ ಮತ್ತು ಸಾರ್ವಜನಿಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಬ್ಯಾಂಕಿಗೆ ಬರತಕ್ಕ ರೂ. 1,16,97,612-00 (ರೂ. ಒಂದು ಕೋಟಿ ಹದಿನಾರು ಲಕ್ಷದ ತೊಂಬತ್ತೇಳು ಸಾವಿರದ ಆರುನೂರ ಹನ್ನೆರಡು ಮಾತ್ರ) ಋಣ (ಚಾರ್ಜ್) ಮತ್ತು ದಿನಾಂಕ :21-02-2022ರಿಂದ ತಗಲುವ ಬಡ್ಡಿ ಸೇರಿಸಿ ಸಂದಾಯವಾಗುವ ತನಕ ಸದರಿ ಸ್ಥಿರಾಸ್ತಿಯ ಮೇಲೆ ಯಾವುದೇ ರೀತಿಯ ವ್ಯವಹಾರವನ್ನು ಮಾಡತಕ್ಕದ್ದಲ್ಲ ಎಂದು ಈ ಮೂಲಕ ಸಾರ್ವಜನಿಕ ಪ್ರಕಟಣೆ ನೀಡುತ್ತಿದ್ದೇವೆ. ಒಂದು ವೇಳೆ ವ್ಯವಹರಿಸಿದ್ದಲ್ಲಿ ಆಗಬಹುದಾದ- ತೊಂದರೆಗಳಿಗೆ ಅವರೇ ಜವಾಬ್ದಾರರು.

**ಸ್ಥಿರಾಸ್ತಿ ವಿವರಗಳು :** ಹರಿಹರ ತಾಲ್ಲೂಕು ಸಬ್ ರಿಜಿಸ್ಟರ್ ರವರ ಅಧಿಕಾರಕ್ಕೆ ಒಳಪಟ್ಟ ಹರಿಹರ ತಾಲ್ಲೂಕು ಹನಗವಾಡಿ ಗ್ರಾಮ ಪಂಚಾಯ್ತಿಗೆ ಸೇರಿದ ಮಾಜೇನಹಳ್ಳಿ ಗ್ರಾಮದ ಖಾತೆ ನಂ. 1210, ಖಾನೇಷುಮಾರಿ ಆಸ್ತಿ ನಂ.17, ಸೈಟ್ ನಂ. 9 ಅಳತೆ ಪೂರ್ವ-ಪಶ್ಚಿಮ 60 ಅಡಿ, ಮತ್ತು ಉತ್ತರ-ದಕ್ಷಿಣ : 20 ಅಡಿ (ಒಟ್ಟು ಅಳತೆ 1200 ಚದರಡಿ) ವುಳ್ಳ ಖಾಲಿ ಜಾಗ ಒಂದು ಮತ್ತು ಸದರಿ ಮಾಜೇನಹಳ್ಳಿ ಗ್ರಾಮದ ಖಾತೆ ನಂ. 1211. ಖಾನೇಷುಮಾರಿ ಆಸ್ತಿ ನಂ.37. ಸೈಟ್ ನಂ. 10, ಅಳತೆ : ಪೂರ್ವ-ಪಶ್ಚಿದ 60 ಅಡಿ, ಮತ್ತು ಉತ್ತರ- ದಕ್ಷಿಣ : 20 ಅಡಿ, (ಒಟ್ಟು ಅಳತೆ 1200 ಚದರಡಿ) ವುಳ್ಳ ಖಾಲಿ ಜಾಗ ಒಂದು, ಈ ಎರಡೂ ಜಾಗಗಳು ಒಂದಕ್ಕೊಂದು ಹೊಂದಿಕೊಂಡಿರುವ ಜಾಗದಲ್ಲಿ ಕಟ್ಟಿಸಿರುವ ವಾಣಿಜ್ಯ ಮಳಿಗೆಗಳು. ಇದರ ಅಳತೆ 2400 ಚದುರ ಅಡಿಗಳು

**ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ :** ಸೈಟ್ ನಂ.18 ಮತ್ತು 19 **ಪಶ್ಚಿಮಕ್ಕೆ :** ರಸ್ತೆ, **ಉತ್ತರಕ್ಕೆ :** ರಸ್ತೆ, **ದಕ್ಷಿಣಕ್ಕೆ :** ಸೈಟ್ ನಂ. 11.

ದಾವಣಗೆರೆ.
ದಿನಾಂಕ : 01.02.2024

**ಅಧಿಕೃತ ಅಧಿಕಾರಿಗಳು**
ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ


# ಅಭಿವೃದ್ಧಿಯಲ್ಲಿ ನಿರಂತರತೆ ಸರ್ಕಾರದ ಮೂಲಮಂತ್ರ : ಸಂಸದ ಸಿದ್ದೇಶ್ವರ



ಅಭಿವೃದ್ಧಿಯಲ್ಲಿ ನಿರಂತರತೆಯನ್ನು ಕಾಪಾಡಿಕೊಂಡು ಅಭಿವೃದ್ಧಿ ಹೊಂದಿದ ಭಾರತವನ್ನಾಗಿ ಮಾಡುವಲ್ಲಿ ಇಂದು ಆರ್ಥಿಕ ಸಚಿವರು ಮಂಡಿಸಿದ ಮಧ್ಯಂತರ ಬಜೆಟ್ ಭದ್ರವಾದ ಅಡಿಪಾಯವನ್ನು ಹಾಕಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ. 2047 ರ ಹೊತ್ತಿಗೆ ವಿಶ್ವದ ಬಲಿಷ್ಟ ರಾಷ್ಟ್ರಗಳಲ್ಲಿ ಭಾರತವೂ ಕೂಡ ಅಗ್ರಸ್ಥಾನದಲ್ಲಿ ನಿಲ್ಲಲಿದೆ, ಅದಕ್ಕೆ ಬೇಕಾದ ಬುನಾದಿಯನ್ನು ಈ ಮೂಲಕ ಹಾಕಲಾಗಿದೆ.

ಒಟ್ಟಾರೆಯಾಗಿ ಬಡವರು ಮತ್ತು ಮಧ್ಯಮ ವರ್ಗದವರನ್ನೇ ಪ್ರಥಮ ಆದ್ಯತೆಯನ್ನಾಗಿಸಿಕೊಂಡು ಮೂಲಸೌಲಭ್ಯ, ಪ್ರವಾಸೋದ್ಯಮ, ಹಾಗೂ ಸಂಶೋಧನಾ ಕ್ಷೇತ್ರಗಳಲ್ಲಿ ನವೋದ್ಯಮಗಳಿಗೆ ಉತ್ತೇಜನ ನೀಡುವ ಮೂಲಕ ಸರ್ಕಾರ ಸರ್ವಾಂಗೀಣ ಅಭಿವೃದ್ಧಿಗೆ ಸಂಕಲ್ಪ ಮಾಡಿದೆ ಎಂದವರು ಹೇಳಿದರು.

# ಮಹಿಳಾ ಸಬಲೀಕರಣದ ಬಜೆಟ್



ಭಾರತ ದೇಶದ ಅಭಿವೃದ್ಧಿಯ ಬಜೆಟ್ ಆಗಿದೆ ಹಾಗೂ ಜನಸ್ನೇಹಿ ಸರ್ವ ಜನಾಂಗದ ಅಭಿವೃದ್ಧಿಯ ಬಜೆಟ್ ವಿಶೇಷವಾಗಿ ಮಹಿಳೆಯರನ್ನು ಸಬಲೀಕರಣ ಮಾಡುವಂತಹ ಬಜೆಟ್ ಇದಾಗಿದೆ. ಇದು ದೇಶದ ಅಭಿವೃದ್ಧಿಯ ಬಜೆಟ್ ಮೋದಿಯವರ ಅಭಿವೃದ್ಧಿಯ ಕ್ರಾಂತಿಕಾರಿ ಹೆಜ್ಜೆ ಎಂದು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ಹೊಗಳಿದ್ದಾರೆ.

# ನಗರದಲ್ಲಿ ನಾಳೆ ರಂಗೋಲಿ ಸ್ಪರ್ಧೆ

ದಾವಣಗೆರೆ, ಫೆ. 1 - ಪ್ರಸಕ್ತ ಸಾಲಿನ ಬೇಟಿ ಬಚಾವೋ, ಬೇಟಿ ಪಡಾವೋ ಕಾರ್ಯಕ್ರಮದಡಿಯಲ್ಲಿ ಹೆಣ್ಣು ಮಕ್ಕಳ ರಕ್ಷಣೆ ಮತ್ತು ಶಿಕ್ಷಣ ಪ್ರೋತ್ಸಾಹಿಸುವ ಕುರಿತು ಅರಿವು ಮೂಡಿಸಲು ನಾಡಿದ್ದು ದಿನಾಂಕ 3 ರಂದು ಮಧ್ಯಾಹ್ನ 2 ಗಂಟೆಗೆ ನಗರದ ಗ್ಲಾಸ್ ಹೌಸ್‌ನಲ್ಲಿ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಆಸಕ್ತ ಮಹಿಳೆಯರು ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ಸೂಕ್ತ ತಲೆಬರಹ, ಸ್ಲೋಗನ್‌ನೊಂದಿಗೆ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸರ್ಕಾರಿ ಬಾಲಕರ ಬಾಲಮಂದಿರ ಕಟ್ಟಡ, 14 ನೇ ಮುಖ್ಯ ರಸ್ತೆ, ಕುವೆಂಪು ನಗರ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ ದೂ.ಸಂ: 08192-264056 ನ್ನು ಸಂಪರ್ಕಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ತಿಳಿಸಿದ್ದಾರೆ.

# ಬಾಡಿಗೆ ಮನೆಯಲ್ಲಿರುವವರಿಗೆ ಸ್ವಂತ ಮನೆ ಯೋಜನೆ

ನವದೆಹಲಿ, ಫೆ. 1 – ಬಾಡಿಗೆ ಮನೆ ಇಲ್ಲವೇ ಕೊಳಗೇರಿಗಳಲ್ಲಿ ಇರುವವರು ಸ್ವಂತ ಮನೆ ಹೊಂದುವ ಯೋಜನೆ ಜಾರಿಗೆ ತರುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ) ಅಡಿಯಲ್ಲಿ ಇನ್ನೂ 2 ಕೋಟಿ ಮನೆಗಳನ್ನು ನಿರ್ಮಿಸಲಾಗುವುದು ಎಂದೂ ಸೀತಾರಾಮನ್ ತಿಳಿಸಿದ್ದಾರೆ. ಬಾಡಿಗೆ ಮನೆ ಇಲ್ಲವೇ ಕೊಳಗೇರಿಗಳಲ್ಲಿ ಹಾಗೂ ಅನಧಿಕೃತ ಬಡಾವಣೆಗಳಲ್ಲಿರುವ ಮಧ್ಯಮ ವರ್ಗದವರು ಸ್ವಂತ ಮನೆ ಹೊಂದಲು ಸರ್ಕಾರ ಯೋಜನೆಯನ್ನು ಜಾರಿಗೆ ತರಲಿದೆ ಎಂದು ಸೀತಾರಾಮನ್ ತಿಳಿಸಿದ್ದಾರೆ.

# ಯಾರದೋ ದುಡ್ಡು, ಯಲ್ಲಮ್ಮನ ಜಾತ್ರೆ ಎನ್ನುತ್ತಿರುವ ಮೋದಿ



ದಾವಣಗೆರೆ, ಫೆ. 1- ಪ್ರಧಾನಿ ನರೇಂದ್ರ ಮೋದಿಯವರ ಬಜೆಟ್ ನಿರಾಶೆ ಮೂಡಿಸಿದೆ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ವ್ಯಂಗ್ಯವಾಡಿದ್ದಾರೆ. ಹಳಿ ತಪ್ಪಿದ ಮೋದಿ ಲೆಕ್ಕ ಸುಳ್ಳು ಗ್ಯಾರಂಟಿಗಳ ಪೊಳ್ಳು ಭರವಸೆ, ಸುಳ್ಳು ಭರವಸೆಗಳ ಬ್ಯಾಲೆಟ್ ಬಜೆಟ್ ಇದಾಗಿದ್ದು, ಮೋದಿ ಮತ್ತು ನಿರ್ಮಲಾ ಸೀತಾರಾಮನ್ ಅವರಿಗೆ ಸಂಸಾರದ ಜವಾಬ್ದಾರಿ ಗೊತ್ತಿಲ್ಲ ಎಂದರು.


## ಅಸಲು ಕ್ರಯಪತ್ರ ಕಳೆದಿದೆ

ನಾನು ಶ್ರೀಮತಿ ಮಂಜುಳಾ ಕೊ. ಮಹಾದೇವಪ್ಪ ವಯಸ್ಸು, 62 ವರ್ಷ, ವಾಸ ಕಂದಗಲ್ಲು ಆದ ನಾನು ಕೆಳಗೆ ಕಾಣಿಸಿದ ಶೆಡ್ಯೂಲ್‌ನಲ್ಲಿನ ಆಸ್ತಿಯನ್ನು ಖರೀದಿಸಿದ್ದು, ಆ ಖರೀದಿ ಪತ್ರದ ಮೂಲ ದಾಖಲಾತಿಯು ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಆ ಸಂಬಂಧವಾಗಿ ಪೋಲೀಸ್ ಆನ್‌ಲೈನ್ ಪೋರ್ಟಲ್ ಮೂಲಕ ದಿನಾಂಕ : 23.01.2024 ರಲ್ಲಿ ಪಿರ್ಯಾದನ್ನು ನೀಡಿದ್ದು, ಈ ಕೆಳಕಂಡ ಮೂಲ ಅಸಲು ದಾಖಲಾತಿಯು ಯಾರಿಗಾದರೂ ಸಿಕ್ಕಲ್ಲಿ ದಯವಿಟ್ಟು ಮೇಲ್ಕಾಣಿಸಿದ ನಮ್ಮ ವಿಳಾಸಕ್ಕಾಗಲೀ ಅಥವಾ ಪೋಲೀಸ್ ಠಾಣೆಗಾಗಲೀ ತಲುಪಿಸತಕ್ಕದ್ದು. ಕ್ರಯಪತ್ರದ ಸಂಖ್ಯೆ Dvg-1-15671/2015-15 ದಿನಾಂಕ : 6.1.2015 ರಲ್ಲಿ ರಿಜಿಸ್ಟಾರ್ ಆಗಿದ್ದು, ಜಯಪ್ಪ ಯಾನೆ ಎಸ್.ಎಂ. ಜಯದೇವಪ್ಪ ಬಿನ್ ಮುರಿಗೆಪ್ಪ ಮತ್ತು ಇತರರಾದ ನನಗೆ ಕ್ರಯ ಖರೀದಿ ಪತ್ರವಾಗಿರುತ್ತದೆ.

ಆಸ್ತಿ ವಿವರ : ದಾವಣಗೆರೆ ತಾ।। ಮಾಯಕೊಂಡ ಹೋಬಳಿ ಕಂದಗಲ್ಲು ಗ್ರಾಮದ ರಿ.ಸ.ನಂ. 230/9ರ ವಿಸ್ತೀರ್ಣ ಎಕರೆಯಲ್ಲಿ 10 ಗುಂಟೆ ಮಾತ್ರ ಇರುವ ತರಿ ಜಮೀನು.

ಚಕ್ಕುಬಂದಿ : ಪೂರ್ವ : ಚಿತ್ರಶೇಖರಪ್ಪ ನವರ ಜಮೀನು, ಪಶ್ಚಿಮ : ಪಂಚಣ್ಣನವರ ಜಮೀನು, ಉತ್ತರ : ಇ.ಸ.ನಂ. ಪೈಕಿರವರ ಜಮೀನು, ದಕ್ಷಿಣ : ಇದೆ. ಸ.ನಂ. ಪೈಕಿ ಉಳಿದ ಜಮೀನು.

**ಇಂತಿ ನಿಮ್ಮ ವಿಶ್ವಾಸಿ**
**ಮಂಜುಳಾ**



ಕರ್ನಾಟಕ ಸರ್ಕಾರ

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ದಾವಣಗೆರೆ

ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಳ ಕಛೇರಿ, ಕೊಠಡಿ ಸಂಖ್ಯೆ:1, ಶ್ರೀ ರಾಮ ನಗರರೋಡ್, ಎನ್.ಸಿ.ಸಿ. ಕ್ಯಾಂಪ್ ಹತ್ತಿರ, ಶ್ರೀ ರಾಮ ನಗರ, ದಾವಣಗೆರೆ 577005, Email: rchodavangere@gmail.com, dhodavangere@gmail.com.

NHM/DVG/RCH/52/2023-24 DATE: 30/01/2024

### ಅಲ್ಪಾವಧಿ ಮ್ಯಾನುವಲ್ ಟೆಂಡರ್ ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ದಾವಣಗೆರೆ ಜಿಲ್ಲೆಗೆ 2023–24 ನೇ ಸಾಲಿನಲ್ಲಿ ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಯ ಹೆರಿಗೆ ಕೊಠಡಿ ಮತ್ತು ಎ.ಎನ್.ಸಿ. ಮತ್ತು ಪಿ.ಎನ್.ಸಿ. ವಾರ್ಡ್‌ಗಳಿಗೆ Digital Screen, Television/ Monitor ಖರೀದಿಸಲು ಅಲ್ಪಾಅವಧಿ ಮ್ಯಾನುವಲ್ ಟೆಂಡರ್ ಪ್ರಕಟಣೆ ಕರೆಯಲಾಗಿದೆ. ಟೆಂಡರ್ ಮೊತ್ತ ರೂ.3,20,000/–. ಇಎಂಡಿ ರೂ. 8000/–. ಟೆಂಡರ್ ಅರ್ಜಿಗಳನ್ನು ದಿನಾಂಕ: 30/01/2024 ರಿಂದ ದಿನಾಂಕ: 05/02/2024ರವರೆಗೆ ಈ ಕೆಳಕಂಡ ಕಛೇರಿ ವಿಳಾಸದಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಿದ ಟೆಂಡರ್ ಅರ್ಜಿಗಳನ್ನು ದಿನಾಂಕ: 05/02/2024 ರ ಸಂಜೆ 04:00ಯೊಳಗೆ ಮುಚ್ಚಿದ ಲಕೋಟೆಯಲ್ಲಿ ಕೆಳಕಂಡ ಕಛೇರಿ ವಿಳಾಸಕ್ಕೆ ಸಲ್ಲಿಸಲು ಕೋರಿದೆ. ಟೆಂಡರ್ ಅರ್ಜಿಗಳನ್ನು ಅದೇ ದಿನಾಂಕ: 05/02/2024 ರ ಸಂಜೆ 05:00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ, ಶ್ರೀರಾಮ ನಗರ, ದಾವಣಗೆರೆ–577005. ಮೊಬೈಲ್ ಸಂಖ್ಯೆ:9449843467, 9449843110, 9341776436 ಇಲ್ಲಿ ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ.

ವಾಸಾಇ/ಡಿವಿಜಿ/549/ಕೆಸ್‌ಎಂಸಿಎ/2023–24

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ದಾವಣಗೆರೆ.



## ಮಾನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಹರಿಹರ, ಸಂಚಾರಿ, ನ್ಯಾಯಾಲಯ ಹೊನ್ನಾಳಿ.

ಅಸಲು ದಾವಾ ನಂ, 47 /2021.

ವಾದಿಗಳು: 1-ಬಿ.ಎಲ್, ಪುಷ್ಪಮಾಲಾ ಮತ್ತು ಇತರರು. - ವಿರುದ್ಧ - ಪ್ರತಿವಾದಿಗಳು 1-1 ಬಿ.ಎಲ್. ಉಮಾಶಂಕರ ಮತ್ತು ಇತರರು, ಪ್ರತಿ ವಾದಿ ನಂ. 3. ಬಿ.ಎಸ್. ವಿಷ್ಣುವರ್ಧನ್ (ಲೇಟ್ ವಸಜ ಇದರ ಗಂಡ) ಸುಮಾರು 62 ವರ್ಷ, ನಿವೃತ್ತ ನೌಕರ, ಹೆಚ್.ಎಮ್.ಟಿ. ಸಿಬ್ಬಂದಿ ವಸತಿ ಸಂಕೀರ್ಣ, ಜಾಲಹಳ್ಳಿ, ಬೆಂಗಳೂರು-560013.

ಪ್ರತಿವಾದಿ ನಂ.4. ಬಿ.ವಿ. ನಮ್ರತ, ತಾಯಿ ಲೇಟ್ ವನಜ 35 ವರ್ಷ, ಗೃಹಿಣಿ ಹೆಚ್.ಎಮ್.ಟಿ. ಸಿಬ್ಬಂದಿ ವಸತಿ ಸಂಕೀರ್ಣ, ಜಾಲಹಳ್ಳಿ ಬೆಂಗಳೂರು-560013 ಪ್ರತಿವಾದಿ ನಂ. 05. ಬಿ.ವಿ. ಪೂಜಿತ, ತಾಯಿ ಲೇಟ್ ವನಜ, 30 ವರ್ಷ ಗೃಹಿಣಿ. ಹೆಚ್.ಎಮ್.ಟಿ. ಸಿಬ್ಬಂದಿ ವಸತಿ ಸಂಕೀರ್ಣ, ಜಾಲಹಳ್ಳಿ ಬೆಂಗಳೂರು-560013. ಪ್ರತಿವಾದಿ,ಸಂ, 6.ಲತಾ ತಂದೆ ಲೇಟ್ ಅಡಿ. ವೇಣುಗೋಪಾಲ್, 66 ವರ್ಷ, ಗೃಹಿಣಿ, ಫ್ಲಾಟ್ ನಂ. 1OL ಬ್ಲಾಸಂ, ಬ್ಲಾಕ್, ಎಮ್.ಎಸ್.ವಿ. ವಿವೇಕ್ ಮಾರ್ವೆಲ್ ಅಪಾರ್ಟ್‌ಮೆಂಟ್, ಸುರಭಿ ಲೇಔಟ್, ವಿಜಯ ಬಾರ್ & ಸ್ಟೋರೆಂಟ್ ಹತ್ತಿರ, ಯಲಹಂಕ, ಬೆಂಗಳೂರು-44. ಪ್ರತಿವಾದಿ. ನಂ. 7.ಹರೀಶ್ ತಂದೆ ಲೇಟ್, ಬಿ.ಡಿ.ವೇಣುಗೋಪಾಲ್, 60 ವರ್ಷ. ದೇವಸ್ಥಾನದ ಬೀದಿ ಶೃಂಗೇರಿ, ಚಿಕ್ಕಮಗಳೂರು ಜಿಲ್ಲೆ, ಪ್ರತಿವಾದಿ: ನಂ, 9.ಸುಜಾತ ತಂದೆ ಲೇಟ್ ಬಿ.ಡಿ.ವೇಣುಗೋಪಾಲ್, 62 ವರ್ಷ, ಗೃಹಿಣಿ, ಕೇರಾಫ್ ಲೋಕೇಶ್ ಮ್ಯಾಸಬ್ಯಾಡರ ಹಟ್ಟಿ, ವಸಂತ ಟಾಕೀಸ್ ಹತ್ತಿರ, ದಾವಣಗೆರೆ. ಪ್ರತಿವಾದಿ, ನಂ. 10. ಮಧು ತಂದೆ ಲೇಟ್ ಬಿ.ಡಿ. ವೇಣುಗೋಪಾಲ್, 60 ವರ್ಷ ಗೃಹಿಣಿ ಕೇರಾಫ್–ಲೋಕೇಶ ಮ್ಯಾಸ ಬ್ಯಾಡರ ಹಟ್ಟಿ, ವಸಂತ ಬಾಕೀಸ್ ಹತ್ತಿರ, ದಾವಣಗೆರೆ, ಪ್ರತಿವಾದಿ ನಂ. 11. ಲೋಕೇಶ ತಂದೆ ಲೇಟ್ ಬಿ.ಡಿ. ವೇಣುಗೋಪಾಲ್, 60 ವರ್ಷ ಗೃಹಿಣೀ ಕೇರಾಫ್-ಲೋಕೇಶ್ ಮ್ಯಾಸಬ್ಯಾಡರಹಟ್ಟಿ, ವಸಂತ ಟಾಕೀಸ್ ಹತ್ತಿರ, ದಾವಣಗೆರೆ. ಪ್ರತಿವಾದಿ ನಂ. 12. ಬಸವರಾಜಪ್ಪ ತಂದೆ ರಾಜಪ್ಪ ವಾಲ್ಮೀಕಿ ರಸ್ತೆ, ನ್ಯಾಮತಿ, ನ್ಯಾಮತಿ ತಾಲ್ಲೂಕು, ದಾವಣಗೆರೆ. ಪ್ರತಿವಾದಿ ನಂ. 13. ಡಿ. ನರಸಿಂಹಪ್ಪ ತಂದೆ ಪಕ್ಕೀರಪ್ಪ, ತಿಲಕ್ ರಸ್ತೆ ನ್ಯಾಮತಿ, ನ್ಯಾಮತಿ ತಾಲ್ಲೂಕು

**ಪ್ರಕಟಣೆ :** ಈ ಮೇಲ್ಕಂಡ ಸನ್ನಿಧಿ ನ್ಯಾಯಾಲಯದಲ್ಲಿ, ವಾದಿಗಳಾದ ಬಿ.ಎಲ್. ಪುಷ್ಪಮಾಲ 2. ಬಿ.ಎಲ್. ಕನಕಾಂಗಿ, 3. ಬಿ.ಎಲ್. ಗಿರಿಜಾ ಇವರು ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನಾನುಭವದ ದಾವೆಯನ್ನು, ಸದರಿ ದಾವಾದಲ್ಲಿ ಈ ಮೇಲೆ ನಮೂದಿಸಿದ ಪ್ರತಿವಾದಿ ನಂ. 3 ರಿಂದ 7ನೇ ಯವರು ಮತ್ತು 9 ರಿಂದ 13ನೇಯವರು ದಾವಾದಲ್ಲಿ ತಿಳಿಸಿದ ವಿಳಾಸದಲ್ಲಿ ನೋಟೀಸ್ ತೆಗೆದುಕೊಳ್ಳದೇ ಇರುವುದರಿಂದ, ಸದರಿಯವರಿಗೆ, ರಾಜ್ಯದ ದಿನ ಪತ್ರಿಕೆಯಾದ ಹೊಸದಿಗಂತ ಮತ್ತು ಸ್ಥಳೀಯ ಪ್ರತಿಕೆಯಾದ ಜನತಾವಾಣಿ ದಿನಪತ್ರಿಕೆಯ ಮೂಲಕ ನೋಟೀಸ್ ಜಾರಿ ಮಾಡುತ್ತಿದ್ದು, ಸದರಿಯವರು ಖುದ್ದು ತಾವಾಗಲೂ ಅಥವಾ ನಿಮ್ಮ ಪರ ವಕೀಲರ ಮೂಲಕವಾಗಲೀ, ದಿನಾಂಕ 02.04.2024 ರಂದು ಆ ದಿನ ಬೆಳ್ಳಗ್ಗೆ 11-00 ಗಂಟೆಗೆ ಹಾಜರಾಗಿ ತಮ್ಮ ಅಹವಾಲನ್ನು ಸಲ್ಲಿಸುವುದು. ಇಲ್ಲವಾದಲ್ಲಿ ನಿಮ್ಮ ಗೈರು ಹಾಜರಾತಿಯನ್ನು ಏಕ-ಪಕ್ಷಯ (ಎಕ್ಸ್-ಪಾರ್ಟಿ) ಎಂದು ನಿಮ್ಮ ಅನುಪಸ್ಥಿತಿಯಲ್ಲಿ ಕಾನೂನು ಪ್ರಕಾರ ತೀರ್ಮಾನಿಸಲ್ಪಡುವುದು ಎಂದು ತಿಳಿಯಿರಿ. ನ್ಯಾಯಾಲಯದ ಮುದ್ರೆ ಹಾಗೂ ನನ್ನ ಸಹಿಯೊಂದಿಗೆ ತಾ.01.02.2024 ರಂದು ನೀಡಲ್ಪಟ್ಟಿದೆ.

ಸಹಿ/- (ಕೆ.ಆರ್. ಮಂಜುನಾಥ)
ವಾದಿಗಳ ಪರ ವಕೀಲರು.
ಸ್ಥಳ: ಹೊನ್ನಾಳಿ. ದಿನಾಂಕ : 01.02.2024

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/- ಶಿರಸ್ತೇದಾರರು, ಹಿರಿಯ ಶ್ರೇಣಿ ಸಿವಿಲ್ ಮತ್ತು ಜೆ.ಎಂ. ಎಫ್.ಸಿ.ರವರ ನ್ಯಾಯಾಲಯ, ಹರಿಹರ, ಹೊನ್ನಾಳಿ.



## ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ. ದಾವಣಗೆರೆ

### ಆಡಳಿತ ಮಂಡಳಿ ಚುನಾವಣೆ – 2024


ಮಾನ್ಯ ಸದಸ್ಯರೇ,

ದಿನಾಂಕ 11.02.2024ರ ಭಾನುವಾರದಂದು ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆ ನಡೆಯಲಿದೆ. ಈ ಚುನಾವಣೆಯಲ್ಲಿ ನಾನು ಎಲ್ಲಾ ಸಮಾಜದ ಹತ್ತು ಹಲವು ಮಹನೀಯರ ಪ್ರೀತಿಪೂರ್ವಕ ಆದೇಶದ ಮೇರೆಗೆ ಓಗೊಟ್ಟು ಚುನಾವಣೆಗೆ ಸ್ಪರ್ಧಿಸುತ್ತಿದ್ದು, ತಮ್ಮಗಳ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಈ ನನ್ನ ಸ್ಪರ್ಧೆಗೆ ಗುರು-ಹಿರಿಯರ ಆಶೀರ್ವಾದ, ಸಜ್ಜನರ ಶುಭ ಹಾರೈಕೆ, ಸ್ನೇಹಿತರ ಪ್ರೀತಿಯ ಒಲುಮೆ ಇದೆ ಎಂದು ಭಾವಿಸುತ್ತೇನೆ. ಅನುಭವಿಗಳಾದ ತಮ್ಮನ್ನು ಮುಕ್ತ ಭೇಟಿಯಾಗಲು ಸಾಧ್ಯವಾಗುತ್ತಿಲ್ಲ. ಈ ಸಂದರ್ಭದಲ್ಲಿ ತಮ್ಮ ಸಲಹೆ, ಸಹಕಾರ ನನಗೆ ಅತ್ಯಗತ್ಯ. ಇದೇ ನಿಮ್ಮಗಳ ಆಶೀರ್ವಾದ ಎಂದು ಭಾವಿಸುತ್ತೇನೆ.


ಕಾರಣ, ತಾವುಗಳು ತಪ್ಪದೇ ಮತಕೇಂದ್ರಕ್ಕೆ ಬಂದು ಮತದಾನ ಮಾಡುವಾಗ ನಿಮ್ಮ ಮತವನ್ನು ನನಗೂ ಒಂದು ನೀಡಿ ಎಂದು ಪ್ರೀತಿಯಿಂದ ವಿನಮ್ರವಾಗಿ ಕೇಳಿಕೊಳ್ಳುತ್ತೇನೆ


ತಮ್ಮ ಸೇವಾಕಾಂಕ್ಷಿ
ಎನ್.ಎ. ಗುರುರಾಜ್ S/O ಎನ್. ಅಡಿವೆಪ್ಪ
ಮೊ : 93438 12345




ದಿನಾಂಕ : 11-02-2024ನೇ ಭಾನುವಾರ
ಸಮಯ : ಬೆಳಗ್ಗೆ 9.00 ರಿಂದ ಸಂಜೆ 4.00 ರವರೆಗೆ
ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ, ದಾವಣಗೆರೆ

# ಜಿಲ್ಲೆಯ ಐವರಿಗೆ 'ಕೆಯುಡಬ್ಲ್ಯುಜೆ' ಪ್ರಶಸ್ತಿ







ದಾವಣಗೆರೆ, ಫೆ.1- ಪತ್ರಿಕೋದ್ಯಮದಲ್ಲಿ ಸಲ್ಲಿಸುತ್ತಿರುವ ಅನುಪಮ ಸೇವೆಗೆ ರಾಜ್ಯದ ಪ್ರತಿಷ್ಠಿತ ಪತ್ರಕರ್ತರ ಬೃಹತ್ ಸಂಘಟನೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಕೊಡಮಾಡುವ ವಾರ್ಷಿಕ ಪ್ರಶಸ್ತಿಗೆ ಜಿಲ್ಲೆಯ 5 ಜನರು ಭಾಜನರಾಗಿದ್ದಾರೆ.

ಮಲ್ನಾಡವಾಣಿ ಸಂಪಾದಕರಾದ ಕೆ.ಏಕಾಂತಪ್ಪ, ವಿಜಯವಾಣಿ ಸ್ಥಾನಿಕ ಸಂಪಾದಕ ಎಂ.ಬಿ. ನವೀನ್, ಜನತಾವಾಣಿ ಸುದ್ದಿ ಸಂಪಾದಕ ಎಂ.ಎಸ್.ಶಿವಶರಣಪ್ಪ, ಹಿರಿಯ ವ್ಯಂಗ್ಯಚಿತ್ರಕಾರ ಹೆಚ್.ಬಿ.ಮಂಜುನಾಥ್ ಮತ್ತು ಚಂದನ ಟಿವಿ ಹಿರಿಯ ವರದಿಗಾರ ಎ.ಎಲ್.ತಾರಾನಾಥ್ ಅವರುಗಳು ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ರಾಜ್ಯದ ವಿವಿಧ ಭಾಗಗಳಲ್ಲಿ ಪ್ರತಿ ವರ್ಷವೂ ನಡೆಯುವ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನದ ಸಂದರ್ಭದಲ್ಲಿ ಕೆಯುಡಬ್ಲ್ಯುಜೆ ಈ ಪ್ರಶಸ್ತಿಗಳನ್ನು ನೀಡುತ್ತಾ ಬಂದಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ಮಾಧ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯರು ಮತ್ತು ಪ್ರತಿಭಾನ್ವಿತರನ್ನು ಗುರುತಿಸಿ, ನೀಡುತ್ತಿರುವ ಈ ಪ್ರಶಸ್ತಿಗೆ ಈ ಬಾರಿ 40ಕ್ಕೂ ಹೆಚ್ಚು ಪತ್ರಕರ್ತರನ್ನು ಆಯ್ಕೆ ಮಾಡಲಾಗಿದ್ದು, ನಾಳೆ ದಿನಾಂಕ 3 ಮತ್ತು 4 ರಂದು ದಾವಣಗೆರೆಯಲ್ಲಿ ಏರ್ಪಾಡಾಗಿರುವ 38ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಿದ್ದಾರೆ.

**ಅಭಿನಂದನೆ :** ಪ್ರಶಸ್ತಿ ಪುರಸ್ಕೃತರನ್ನು ಕಾರ್ಯನಿರತ ಪತ್ರಕರ್ತರ ಸಂಘದ ಜಿಲಾಧ್ಯಕ್ಷ ಇ.ಎಂ. ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್, ಖಜಾಂಚಿ ಎನ್.ವಿ. ಬದರಿನಾಥ್, ದಾವಣಗೆರೆ ಜಿಲ್ಲಾ ವರದಿಗಾರರ ಕೂಟದ ಪ್ರಧಾನ ಕಾರ್ಯದರ್ಶಿ ಡಾ. ಸಿ.ವರದರಾಜ್, ಖಜಾಂಚಿ ಮಧು ನಾಗರಾಜ್ ಕುಂದುವಾಡ ಅಭಿನಂದನೆ ಸಲ್ಲಿಸಿದ್ದಾರೆ.

## ಸರ್ಕಾರಕ್ಕೆ 1.02 ಲಕ್ಷ ಕೋಟಿ ರೂ.ಗಳ ಡಿವಿಡೆಂಡ್

ನವದೆಹಲಿ, ಫೆ. 1 – ಆರ್.ಬಿ.ಐ. ಹಾಗೂ ಸಾರ್ವಜನಿಕ ವಲಯದ ಹಣಕಾಸು ಸಂಸ್ಥೆಗಳಿಂದ ಕೇಂದ್ರ ಸರ್ಕಾರ ಮುಂದಿನ ಹಣಕಾಸು ವರ್ಷದಲ್ಲಿ 1.02 ಲಕ್ಷ ಕೋಟಿ ರೂ.ಗಳ ಡಿವಿಡೆಂಡ್ ಪಡೆಯಲಿದೆ ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ. ಕೇಂದ್ರ ಸರ್ಕಾರ 48 ಸಾವಿರ ಕೋಟಿ ರೂ.ಗಳ ಡಿವಿಡೆಂಡ್ ಪಡೆಯಲಿದೆ ಎಂದು ಕಳೆದ ಬಜೆಟ್ ಅಂದಾಜಿನಲ್ಲಿ ತಿಳಿಸಲಾಗಿತ್ತು. ಆದರೆ, ಈ ವರ್ಷ 1.04 ಲಕ್ಷ ಕೋಟಿ ರೂ.ಗಳ ಡಿವಿಡೆಂಡ್ ಪಡೆಯುತ್ತಿದೆ.

# 12ನೇ ಶತಮಾನ ಕ್ರಾಂತಿ ಪುರುಷರ ಯುಗ

## ಭಕ್ತಿಯ ಪರಾಕಾಷ್ಠೆ ತೋರಿದ ಶ್ರೀ ಮಡಿವಾಳ ಮಾಚಿದೇವರು : ಜಿಲ್ಲಾಧಿಕಾರಿ ಸ್ಮರಣೆ

ದಾವಣಗೆರೆ, ಫೆ.1- 12ನೇ ಶತಮಾನದಲ್ಲಿ ಹಲವಾರು ಕ್ರಾಂತಿ ಪುರುಷರ ಜನನವಾಗಿದ್ದು, ಅಂದಿನ ಶೋಷಣೆ, ಅಸ್ಪೃಶ್ಯತೆ, ಅನಕ್ಷರಸ್ಥತೆ, ಜಾತಿಯತೆ ವಿರುದ್ಧ ತಮ್ಮ ವಚನಗಳ ಮೂಲಕ ಹೋರಾಟ ಮಾಡಿದರು. ಅವರಲ್ಲಿ ಕಾಯಕ ನಿಷ್ಠೆ, ಭಕ್ತಿಯ ಪರಾಕಾಷ್ಠೆ ತೋರಿದವರು ಶ್ರೀ ಮಡಿವಾಳ ಮಾಚಿದೇವರು ಎಂದು ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್ ತಿಳಿಸಿದರು.

ಅವರು ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಮಡಿವಾಳ ಮಾಚಿದೇವ ಸಂಘ, ಇವರ ಆಶ್ರಯದಲ್ಲಿ ಆಯೋಜಿಸಲಾಗಿದ್ದ ವಚನ ಸಂರಕ್ಷಕ, ಶ್ರೀ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಶರಣರಾಗಿದ್ದ ಮಡಿವಾಳ ಮಾಚಿದೇವರು ತನ್ನ ಕುಲದ ಕಾಯಕ ಮಾಡುತ್ತಲೇ, ಸಮಾಜದ ಅನಿಷ್ಟ ಪಿಡುಗುಗಳ ವಿರುದ್ಧ ಹೋರಾಟ ಮಾಡಿ ಉತ್ತಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ಅಂತಹ ಶ್ರೇಷ್ಠ ವ್ಯಕ್ತಿತ್ವದ ಮಾಚಿದೇವರ ಆದರ್ಶದಲ್ಲಿ ಸಾಗುವ ಮೂಲಕ ಬದುಕಿನ ಬಗ್ಗೆ ಅವರು ಹಾಕಿಕೊಟ್ಟ ಮಾರ್ಗದರ್ಶನ, ಬೋಧನೆ ಅನುಸರಿಸಿ, ಮುಂದಿನ ಪೀಳಿಗೆಗೆ ಉತ್ತಮ ವೇದಿಕೆ ನಿರ್ಮಾಣ ಮಾಡಬೇಕಾಗಿದೆ ಎಂದು ಸಲಹೆ ನೀಡಿದರು.



ದಾವಣಗೆರೆ ಜಿಲ್ಲಾ ಮಡಿವಾಳ ಮಾಚಿದೇವ ಸಂಘದ ಜಿಲ್ಲಾಧ್ಯಕ್ಷ ಎಂ.ನಾಗೇಂದ್ರಪ್ಪ ಮಾತನಾಡಿ, ಶೋಷಿತ ಸಮಾಜದಲ್ಲಿ ಕಟ್ಟಕಡೆಯ ಸಮಾಜ ನಮ್ಮದು. ನಮ್ಮ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವ ಸಲುವಾಗಿ ಅನ್ನಪೂರ್ಣಮ್ಮ ವರದಿ ರಾಜ್ಯ ಸರ್ಕಾರ ಸಲ್ಲಿಕೆಯಾಗಿದ್ದು ಸರ್ಕಾರದ ಗಮನಕ್ಕೆ ತರುವಂತೆ ಮನವಿ ಮಾಡಿದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಜಿ.ಪಂ.ಉಪ ಕಾರ್ಯದರ್ಶಿ ಕೃಷ್ಣನಾಯ್ಕ್, ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ; ಚಂದ್ರಶೇಖರ್ ಸುಂಕದ್, ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಓಂಕಾರಪ್ಪ, ಸಹ ಕಾರ್ಯದರ್ಶಿ ಆರ್.ಎನ್.ಧನಂಜಯ, ಉಪಾಧ್ಯಕ್ಷರಾದ ಪಿ. ಮಂಜುನಾಥ್, ವಿಜಯಕುಮಾರ್, ಖಜಾಂಚಿ ಸುರೇಶ್ ಕೋಗುಂಡೆ, ಪತ್ರಕರ್ತ ಎಂ.ವೈ.ಸತೀಶ್, ಎಂ.ರುದ್ರೇಶ್, ಮಂಜುನಾಥ್ ಕಕ್ಕರಗೊಳ್ಳ, ರವಿ ಚಿಕ್ಕಣ್ಣ, ಡೈಮಂಡ್ ಮಂಜುನಾಥ್, ಬಾತಿ ಶಂಕರ್, ನಾಗಮ್ಮ, ದುಗ್ಗಪ್ಪ, ಅಂಜಿನಪ್ಪ ಪೂಜಾರ್, ಗುಡ್ಡಪ್ಪ, ಬೊಮ್ಮಣ್ಣ, ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ಕಾರ್ಯದರ್ಶಿ ರವಿಚಂದ್ರ ಹಾಗೂ ಇತರರು ಇದ್ದರು.

## ಹಿರಿಯ ಸಾಹಿತಿ ಬಿ.ಟಿ. ಜಾಹ್ನವಿಗೆ 'ಡಾ. ಸಿದ್ದಲಿಂಗಯ್ಯ ಸಾಹಿತ್ಯ ಪ್ರಶಸ್ತಿ'



ದಾವಣಗೆರೆ, ಫೆ. 1- ಕನ್ನಡ ಸಾಹಿತ್ಯ ಲೋಕದ ವಿಶಿಷ್ಟ ಹೆಜ್ಜೆ ಗುರುತಿನ ವಿಭಿನ್ನ ಲೇಖಕರಾದ ನಗರದ ಹಿರಿಯ ಸಾಹಿತಿ ಶ್ರೀಮತಿ ಬಿ.ಟಿ. ಜಾಹ್ನವಿ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕೊಡಮಾಡುವ 2023-24ನೇ ಸಾಲಿನ 'ಡಾ. ಸಿದ್ದಲಿಂಗಯ್ಯ ಸಾಹಿತ್ಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಇತ್ತೀಚೆಗೆ ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ನಡೆದ ಸರ್ಕಾರದಿಂದ ಕೊಡ ಮಾಡುವ ಜೀವಮಾನ ಸಾಧನೆ ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಜಾಹ್ನವಿ ಅವರನ್ನು ಸನ್ಮಾನಿಸಿ, ಗೌರವಿಸಿದರು.

## ಗರ್ಭಕಂಠದ ಕ್ಯಾನ್ಸರ್ ಲಸಿಕೆಗೆ ಉತ್ತೇಜನಕ್ಕೆ ಕೇಂದ್ರ ನಿರ್ಧಾರ

ನವದೆಹಲಿ, ಫೆ. 1 – ಒಂಭತ್ತರಿಂದ 14 ವರ್ಷದ ಬಾಲಕಿಯರಿಗೆ ಗರ್ಭಕಂಠದ ಕ್ಯಾನ್ಸರ್ ಲಸಿಕೆ ನೀಡಲು ಕೇಂದ್ರ ಸರ್ಕಾರ ಉತ್ತೇಜನ ನೀಡಲಿದೆ. ಬಜೆಟ್ ವೇಳೆ ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಈ ವಿಷಯ ತಿಳಿಸಿದ್ದಾರೆ. ದೇಶದಲ್ಲಿ ಗರ್ಭಕಂಠದ ಕ್ಯಾನ್ಸರ್ ಮೇಲೆ ನಿಗಾ ವಹಿಸಿರುವುದಾಗಿ ಕೇಂದ್ರ ಆರೋಗ್ಯ ಸಚಿವಾಲಯ ಕಳೆದ ತಿಂಗಳು ತಿಳಿಸಿತ್ತು. ಭಾರತ ವಿಶ್ವದ ಶೇ.16ರಷ್ಟು ಮಹಿಳಾ ಜನಸಂಖ್ಯೆ ಹೊಂದಿದೆ. ಆದರೆ, ಗರ್ಭಕಂಠದ ಕ್ಯಾನ್ಸರ್ ಪ್ರಮಾಣ ಶೇ.25ರಷ್ಟಿದೆ. ಈ ಕ್ಯಾನ್ಸರ್ ಕಾರಣದಿಂದ ಸಂಭವಿಸುವ ಸಾವುಗಳ ಪ್ರಮಾಣ ಜಾಗತಿಕವಾಗಿ ಮೂರನೇ ಒಂದರಷ್ಟಿದೆ.

## ಮೂರು ಆರ್ಥಿಕ ವಲಯಗಳ ರೈಲ್ವೆ ಕಾರಿಡಾರ್

### 40 ಸಾವಿರ ಸಾಮಾನ್ಯ ಬೋಗಿಗಳು ವಂದೇ ಭಾರತ್ ದರ್ಜೆಗೆ ಪರಿವರ್ತನೆ

ನವದೆಹಲಿ, ಫೆ. 1 – ಕೇಂದ್ರ ಸರ್ಕಾರ ಮೂರು ಪ್ರಮುಖ ಆರ್ಥಿಕ ರೈಲ್ವೆ ಕಾರಿಡಾರ್ ಯೋಜನೆಗಳನ್ನು ಜಾರಿಗೆ ತರಲಿದೆ ಹಾಗೂ 40 ಸಾವಿರ ಸಾಮಾನ್ಯ ರೈಲ್ವೆ ಬೋಗಿಗಳನ್ನು ವಂದೇ ಭಾರತ್ ದರ್ಜೆಗೆ ಪರಿವರ್ತಿಸಲಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ.

ಹೊಸ ಕಾರಿಡಾರ್‌ಗಳನ್ನು ರೂಪಿಸುವುದರಿಂದ ಹೆಚ್ಚಿನ ಸಂಚಾರ ಇರುವ ಕಾರಿಡಾರ್‌ಗಳ ಮೇಲಿನ ಒತ್ತಡ ಕಡಿಮೆಯಾಗಲಿದೆ. ಇದರಿಂದ ಪ್ರಯಾಣಿಕರ ರೈಲುಗಳ ಕಾರ್ಯನಿರ್ವಹಣೆಯೂ ಸುಧಾರಿಸಲಿದೆ ಎಂದವರು ಹೇಳಿದ್ದಾರೆ. ಇಂಧನ, ಖನಿಜ ಹಾಗೂ ಸಿಮೆಂಟ್ ರೂಪಿಸಲಾಗುವುದು. ಬಂದರು ಸಂಪರ್ಕ ಕಾರಿಡಾರ್ ಹಾಗೂ ಹೆಚ್ಚಿನ ಸಂಚಾರ ಇರುವ ಕಾರಿಡಾರ್‌ಗಳನ್ನು ರೂಪಿಸಲಾಗುವುದು ಎಂದವರು ತಿಳಿಸಿದರು.

ಪಿಎಂ ಗತಿ ಶಕ್ತಿ ಅನ್ವಯ ಈ ಸಂಪರ್ಕ ಸುಧಾರಣೆ ಕ್ರಮ ತೆಗೆದುಕೊಳ್ಳಲಾಗುವುದು. ಇದರಿಂದ ಸರಕು ಸಾಗಣೆ ದಕ್ಷತೆ ಹೆಚ್ಚಾಗಿ ವೆಚ್ಚ ಕಡಿಮೆಯಾಗಲಿದೆ ಎಂದವರು ತಿಳಿಸಿದ್ದಾರೆ.

## ನಗರದಲ್ಲಿ ನಾಳೆಯಿಂದ ಆಕ್ಯುಪ್ರೆಶರ್, ವೈಬ್ರೇಷನ್ ಥೆರಪಿ ಚಿಕಿತ್ಸಾ ಶಿಬಿರ

ದಾವಣಗೆರೆ,ಫೆ.1- ರಾಜಸ್ಥಾನದ ಆಕ್ಯುಪ್ರೆಶರ್ ರಿಸರ್ಚ್ ಟ್ರೇನಿಂಗ್ ಮತ್ತು ಟ್ರೀಟ್‌ಮೆಂಟ್ ಸಂಸ್ಥೆಯ ವಿಶೇಷ ತಜ್ಞರಿಂದ ಆಕ್ಯುಪ್ರೆಶರ್ ವೈಬ್ರೇಷನ್ ಥೆರಪಿ, ಸುಜೋಕ ಚಿಕಿತ್ಸಾ ಶಿಬಿರವನ್ನು ಜಿಲ್ಲಾ ರೋಟರಿ ಕ್ಲಬ್ ಸಂಸ್ಥೆಯು ನಾಡಿದ್ದು ದಿನಾಂಕ 3ರ ಶನಿವಾರದಿಂದ ಆರು ದಿನಗಳ ಕಾಲ ನಗರದ ರೋಟರಿ ಬಾಲಭವನದ ಆವರಣದಲ್ಲಿ ಆಯೋಜಿಸಿದೆ.


**ದಿ ದಾವಣಗೆರೆ ಅರ್ಬನ್ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆ : ಎಂ.ಜೆ.ಗಿರೀಶ್ ರವರಿಗೆ ಶುಭ ಹಾರೈಕೆ**



ದಿನಾಂಕ 11/02/2024 ರಂದು ನಡೆಯಲಿರುವ ದಿ ದಾವಣಗೆರೆ ಅರ್ಬನ್ ಬ್ಯಾಂಕ್ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಮಾಗಾನಹಳ್ಳಿ ಜಯಣ್ಣನವರ ಮಗನಾದ **ಶ್ರೀ ಎಂ.ಜೆ. ಗಿರೀಶ್** ಇವರು ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.
ಇವರು ಅಭೂತಪೂರ್ವ ಮತಗಳನ್ನು ಪಡೆದು ವಿಜಯಶಾಲಿಯಾಗಲೆಂದು ಶುಭ ಹಾರೈಸುತ್ತೇವೆ.
ಮಾನ್ಯ ಮತದಾರ ಬಾಂಧವರೇ ಒಂದು ಮತವನ್ನು ಎಂ.ಜೆ. ಗಿರೀಶ್ ರವರಿಗೆ ನೀಡಬೇಕೆಂದು ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇವೆ.

**ಎಂ.ಜೆ. ಗಿರೀಶ್ ಗೆಳೆಯರ ಬಳಗ, ದಾವಣಗೆರೆ.**



**ಐದನೇ ವರ್ಷದ ಪುಣ್ಯಸ್ಮರಣೆ**



ನೇತ್ರದಾನಿ
**ಶ್ರೀಮತಿ ಲಲಿತಮ್ಮ ಕೊಟ್ಯಾಳ್ (ಗಿರಿಜಮ್ಮ)**
ನಿಧನ: 02-02-2019

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು.
ನೀವು ಹಾಕಿ ಕೊಟ್ಟ ಮಾರ್ಗದರ್ಶನ ನಮಗೆ ದಾರಿ ದೀಪ,
ಸದಾ ನಿಮ್ಮ ಸ್ಮರಣೆಯಲ್ಲಿರುವ:

ಪತಿ : ಶ್ರೀ ಕೆ.ಬಿ. ಜನಾರ್ದನಪ್ಪ, ಶಿರಮಗೊಂಡನಹಳ್ಳಿ.
ಪುತ್ರಿಯರಾದ : ಶ್ರೀಮತಿ ಕೆ.ಜೆ. ವೀಣಾ ಸತೀಶ್, ಚಟ್ನಹಳ್ಳಿ.
ಶ್ರೀಮತಿ ಕೆ.ಜೆ. ವಿನೋದ ಚಂದ್ರಶೇಖರ್, ಕಕ್ಕರಗೊಳ್ಳ.
ಪುತ್ರ : ಶ್ರೀ ಕೆ.ಜೆ. ರಾಘವೇಂದ್ರ ಸೊಸೆ : ಶ್ರೀಮತಿ ಆಶಾ ರಾಘವೇಂದ್ರ
ಪ್ರೀತಿಯಿಂದ ಅಮ್ಮಮ್ಮ ಎಂದು ಕರೆಯುತ್ತಿದ್ದ ಮೊಮ್ಮಕ್ಕಳಾದ:
ಚಿ|| ಇಂಧೂದರ ಎ.ಎಸ್., ಚಿ|| ದರ್ಶನ್ ಎ.ಎಸ್ ಚಟ್ನಹಳ್ಳಿ,
ಕು|| ಪೂರ್ವಿಕಾ ಕೆ.ಸಿ. ಕಕ್ಕರಗೊಳ್ಳ., ಚಿ|| ಕೇಶವ್ ಸಿದ್ಧಾಂತ್ ಕೆ.ಆರ್.

ಕೊಟ್ಯಾಳ್ (ಕರಿಯಪ್ಪರ) ವಂಶಸ್ಥರು ಶಿರಮಗೊಂಡನಹಳ್ಳಿ,
ಗೌಡ್ರು ವಂಶಸ್ಥರು ಚಿಕ್ಕನಹಳ್ಳಿ.


## ವಾಲ್ಮೀಕಿ ಜಾತ್ರೆ : ಇಂದು ಸಭೆ

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇಂದು ಸಂಜೆ 4.30 ಕ್ಕೆ ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ವಾಲ್ಮೀಕಿ ಭವನದಲ್ಲಿ 6ನೇ ವರ್ಷದ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.


**ಪುಣ್ಯಸ್ಮರಣೆ**



**ಶ್ರೀ ಕೆ. ತಿಪ್ಪಣ್ಣನವರು**
ಜನನ : 6.10.1933 ಮರಣ : 6.2.2018
ನೀವು ನಮ್ಮನ್ನು ಅಗಲಿ ಆರು ವರ್ಷಗಳಾದವು.

**ಶ್ರೀಮತಿ ಎ. ಗೌರಮ್ಮನವರು**
ಜನನ : 28.11.1936 ಮರಣ : 2.2.2010
ನೀವು ನಮ್ಮನ್ನು ಅಗಲಿ ಹದಿನಾಲ್ಕು ವರ್ಷಗಳಾದವು.



ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.
ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು, ಮರಿಮೊಮ್ಮಕ್ಕಳು
**ಶ್ರೀ ಮಹಾಲಿಂಗೇಶ್ವರ ಟ್ರೇಡರ್ಸ್**
ಎ.ಪಿ.ಎಂ.ಸಿ. ಯಾರ್ಡ್, 'ಸಿ' ಬ್ಲಾಕ್, ದಾವಣಗೆರೆ.


## ಗಣರಾಜ್ಯೋತ್ಸವ ಪರೇಡ್‌ನಲ್ಲಿ ಶಿಕ್ಷಕಿ ಉಷಾ ಆರ್.ಜನ್ನು




ದಾವಣಗೆರೆ, ಫೆ. 1 - ದೆಹಲಿಯಲ್ಲಿ ನಡೆದ 75ನೇ ಗಣರಾಜ್ಯೋತ್ಸವ ಪರೇಡ್‌ನಲ್ಲಿ ನಗರದ ಶಿಕ್ಷಕಿ ಕು. ಉಷಾ ಆರ್ ಜನ್ನು ಅವರು ಭಾಗವಹಿಸಿ, ಸಾಂಸ್ಕೃತಿಕ ವಿಭಾಗದ ವೀರಗಾಸೆ ನೃತ್ಯ ಪ್ರದರ್ಶನ ನೀಡಿದ್ದಾರೆ.

## ರಾಷ್ಟ್ರೀಯ ಕಬಡ್ಡಿ ಪಂದ್ಯಕ್ಕೆ ನಗರದ ಮಾಳಪ್ಪ ಆಯ್ಕೆ



ದಾವಣಗೆರೆ, ಫೆ.1- ಹೈದರಾಬಾದ್‌ನಲ್ಲಿ ದಿನಾಂಕ 1 ರಿಂದ 4 ರವರೆಗೆ ನಡೆಯುತ್ತಿರುವ 49ನೇ ಜ್ಯೂನಿಯರ್ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್ ಶಿಪ್ ಪಂದ್ಯಾವಳಿಗೆ ನಗರದ ವೆಂಕಟೇಶ್ವರ ತಂಡದ ಮಾಳಪ್ಪ ಅವರು ಆಯ್ಕೆಯಾಗಿರುತ್ತಾರೆ. ಮಾಳಪ್ಪ ಅವರಿಗೆ ಜಿಲ್ಲಾ ಅಮೆಚೂರು ಕಬಡ್ಡಿ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿ, ಪದಾಧಿಕಾರಿಗಳು ಹಾಗೂ ವೆಂಕಟೇಶ್ವರ ತಂಡದ ತರಬೇತುದಾರ ರಾಜು, ಪುಟ್ಟರಾಜು ಹಾಗೂ ಕ್ರೀಡಾಪಟುಗಳು ಅಭಿನಂದಿಸಿದ್ದಾರೆ.

## ಬೆಳ್ಳೂಡಿ ಮಂಜುನಾಥ್‌ರವರಿಂದ ನಾಮಪತ್ರ ಸಲ್ಲಿಕೆ



ಬಿ.ಜಿ. ಶಿವುಕುಮಾರ್, ಜೆ. ಸೋಮನಾಥ್, ಟಿ. ಶಂಕ್ರಪ್ಪ, ಮಹಾಂತೇಶ್ ಒಣರೊಟ್ಟಿ, ಬೆಳ್ಳೂಡಿ ಶಿವುಕುಮಾರ, ಎಸ್.ಜಿ. ಉಳುವಯ್ಯ, ಆಲೂರು ಜಯಣ್ಣ, ಎ.ಜಿ. ಭರತ್, ಮಹಾರುದ್ರಯ್ಯ, ಎನ್.ಟಿ. ಪ್ರಕಾಶ್, ಎಸ್.ಆರ್.ಎಸ್. ಸುರೇಶ್, ರವಿಕುಮಾರ್, ಸುರೇಂದ್ರ, ಶ್ರೀನಿವಾಸ್, ಹಳ್ಳಿಕೇರಿ ಸಂತೋಷ್, ಹೇಮಚಂದ್ರ, ಎಮ್. ಮಂಜುನಾಥ್, ಬೇಕರಿ ನಾಗಣ್ಣ, ಕೆರನಳ್ಳಿ ಜಿ.ವಿ. ಪಾಟೀಲ್, ಬೆಳ್ಳೂಡಿ ಸದಾನಂದ, ಶಫಿ, ಯಾಯಾಖಾನ್, ಅಂದನೂರು ಶಾಂತಣ್ಣ, ರೇವಣಪ್ಪ, ರಾಮಚಾರಿ, ಜಗದೀಶ್, ಉಮೇಶ್, ವಿಭೂತಿ ಮಲ್ಲಣ್ಣ, ಎ.ಬಿ. ಸುಮಿತ್, ಲಿಂಗೇಶ್, ಹಿರೇಗೌಡ, ಜ್ಯೋತಿಗೌಡ, ಶಾಮನೂರು ಕುಮಾರ್ ಇನ್ನೂ ಮುಂತಾದ ಗಣ್ಯ ವರ್ತಕರು, ಸ್ನೇಹಿತರು ಹಾಗೂ ಹಿತೈಷಿಗಳು ಜೊತೆಗೂಡಿ ಹೆಜ್ಜೆ ಹಾಕಿದರು.


**ಭಾವಪೂರ್ಣ ಶ್ರದ್ಧಾಂಜಲಿ**


ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್. ಬ್ಯಾಂಕ್ ಲಿ., ನ ವೃತ್ತಿಪರ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದ ನೇತ್ರದಾನಿ
**ಆರ್. ನಾಗರಾಜ್ ಶೆಟ್ಟಿ ಅವರು**
ದಿನಾಂಕ : 01.02.2024 ರಂದು ದೈವಾಧೀನರಾಗಿದ್ದು, ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮಾತೆ ಶ್ರೀ ಕನ್ನಿಕಾಪರಮೇಶ್ವರಿ ಅಮ್ಮನವರು ಇವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುತ್ತಾ, ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು : ಆರ್.ಜಿ. ಶ್ರೀನಿವಾಸಮೂರ್ತಿ
ಉಪಾಧ್ಯಕ್ಷರು : ಕೆ.ವಿ. ಮಂಜುನಾಥ್
ನಿರ್ದೇಶಕರು, ಷೇರುದಾರ ಬಾಂಧವರು ಹಾಗೂ ಸಿಬ್ಬಂದಿ ವರ್ಗ
ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್ ಬ್ಯಾಂಕ್ ಲಿ.,
#165/1-2, 3ನೇ ಮೇನ್, ಶ್ರೀ ವಾಸವಿ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.





**ದ್ವಿತೀಯ ವರ್ಷದ ಪುಣ್ಯಸ್ಮರಣೆ**



**ಲಿಂ|| ಶ್ರೀ ಗುರುದೇವ ಮೂರ್ತಿ ಎಸ್.ಎಂ.**
ನಿವೃತ್ತ ಜಂಟಿ ಕೃಷಿ ಇಲಾಖೆ ನಿರ್ದೇಶಕರು, ಕರ್ನಾಟಕ ಸರ್ಕಾರ
ಮಾಜಿ ಅಧ್ಯಕ್ಷರು, ಜಂಗಮ ಸೌಹಾರ್ದ ಬ್ಯಾಂಕ್, ದಾವಣಗೆರೆ.
ಮಾಜಿ ಉಪಾಧ್ಯಕ್ಷರು, ಹಿರಿಯ ನಾಗರಿಕರ ಸಂಘ, ದಾವಣಗೆರೆ.

*Your exemplary ways , Character and ideas, remain with us forever, your sense of duty and simplicity continue to light up our path in our daily life...*
*We cherish your found memory this day and every day…*

ನೀವು ನಮ್ಮನ್ನಗಲಿ ಇಂದಿಗೆ (01.02.2024) ಎರಡು ವರ್ಷಗಳಾದವು.
ನೀವು ತೋರಿಸಿದ ಉನ್ನತ ಮಾರ್ಗ, ನಿಮ್ಮ ಆದರ್ಶ ಹಾಗೂ ವಿಚಾರಗಳು ನಮ್ಮ ಮನಸ್ಸಿನಲ್ಲಿ ಚಿರಸ್ಥಾಯಿ ನಿಮ್ಮ ಕರ್ತವ್ಯ ನಿಷ್ಠೆ ಹಾಗೂ ಸರಳತೆ ನಮ್ಮ ಜೀವನಕ್ಕೆ ದಾರಿ ದೀಪ...
ನಿಮ್ಮ ಸ್ಮರಣೆ ನಮಗೆ ಪ್ರತಿದಿನವೂ ಚೈತನ್ಯದಾಯಕ...

ಮಗ : ಡಾ|| ವೀರೇಂದ್ರಸ್ವಾಮಿ, ಎಸ್.ಎಂ., MS., FIAS., ಪ್ರೊಫೆಸರ್, ಸೀನಿಯರ್ ಜನರಲ್ & ಗ್ಯಾಸ್ಟ್ರೋ, ಲ್ಯಾಪ್ರೋಸ್ಕೋಪಿಕ್ ಸರ್ಜನ್, ದಾವಣಗೆರೆ.
ಸೊಸೆ : ಶ್ರೀಮತಿ ಅನುಪ ವೀರೇಂದ್ರಸ್ವಾಮಿ
ಅಳಿಯ : ಡಾ|| ಮಹಂತೇಶ್ ಶರ್ಮ, ಎಂ.ಡಿ., ಪ್ರೊಫೆಸರ್ ಅನಸ್ತೇಷಿಯಾ, ಜೆಜೆಎಂಎಂಸಿ, ದಾವಣಗೆರೆ.
ಡಾ|| ಜ್ಯೋತಿ ಪ್ರಕಾಶ್, ಎಂ.ಡಿ., ಮೆಡಿಸಿನ್ ಸೀನಿಯರ್ ಫಿಜಿಷಿಯನ್ & ಕಾರ್ಡಿಯೋಲಜಿಸ್ಟ್, ಅಪೂರ್ವ ಪಾಲಿ ಕ್ಲಿನಿಕ್, ದಾವಣಗೆರೆ.
ಮಕ್ಕಳು : ಶ್ರೀಮತಿ ಸೌಭಾಗ್ಯ ದೇವಿ ಎಸ್.ಎಂ.,
ಡಾ|| ಸವಿತಾ ದೇವಿ, ಎಂ.ಡಿ., ಸೀನಿಯರ್ ಪೆಥಾಲಜಿಸ್ಟ್, ಕರ್ನಾಟಕ ಸರ್ಕಾರ
ಮೊಮ್ಮಕ್ಕಳು : ಶ್ರೀ ಅನುಪ್ ಶರ್ಮಾ ಎನ್.ಎಂ., ಬಿ.ಇ. ಮೆಕ್ಯಾನಿಕಲ್
ಡಾ|| ಅಭಿಷೇಕ್ ಶರ್ಮಾ ಎನ್.ಎಂ., ಎಂ.ಬಿ.ಬಿ.ಎಸ್.,
ಶುಭಾಂಕರ್ ಸ್ವಾಮಿ ಜಿ.ಎಂ., ಕು|| ಸಿರಿ ಎಸ್.ಎಂ., ಚಿ|| ಸಮೃದ್ಧಿ ಎಸ್.ಎಂ.

- ಆವರಗೊಳ್ಳ ಬೆನ್ನೂರು ಮಠದ ಬಂಧುಗಳು.
- ಲೋಕಿಕೆರೆ ಬಂಧುಗಳು.
- ಸಂಗನಹಾಳ್ ಮಠದ ಬಂಧುಗಳು.
- ನರೇಂದ್ರ ಮಠದ ಕುಟುಂಬದವರು, ಬಂಧುಗಳು, ಹುಬ್ಬಳ್ಳಿ.
- ಜಂಗಮ ಸಹಕಾರಿ ಬ್ಯಾಂಕ್‌ನ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ದಾವಣಗೆರೆ.
- ದಾವಣಗೆರೆ ಸೀನಿಯರ್ ಸಿಟಿಜನ್ ಅಸೋಸಿಯೇಷನ್
- ಅನುಪ ಹಾಸ್ಪಿಟಲ್, ಡಾಕ್ಟರ್ಸ್ ಮತ್ತು ಸಿಬ್ಬಂದಿಗಳು, ದಾವಣಗೆರೆ.
- ಕೇರ್ ಪಾಲಿ ಕ್ಲಿನಿಕ್ ಡಾಕ್ಟರ್ಸ್, & ಸಿಬ್ಬಂದಿಗಳು, ದಾವಣಗೆರೆ.